ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

ಆಶ್ವೀಜ– ಕಾರ್ತಿಕ

ಸಂಪುಟ 3 ಸಂಚಿಕೆ 5

ಸಂಪಾದಕರು : ಮನೋರಮಾ. ಬಿ.ಎನ್
ವೆಬ್‌ಸೈಟ್ ವಿನ್ಯಾಸ : ಮಹೇಶ್ ಎಳ್ಯಡ್ಕ,
ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು.
ವಿತರಣಾ ಮುಖ್ಯಸ್ಥ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ರಾಜ್‌ಗೋಪಾಲ್.ಬಿ.ಎನ್
ಪ್ರಕಾಶನ : 'ಸಾನಿಧ್ಯ', ಮಡಿಕೇರಿ
ಮುಖಪುಟ ವಿನ್ಯಾಸ : ಸುನೀಲ ಕುಲಕರ್ಣಿ
ಪುಟ ವಿನ್ಯಾಸ ಹಾಗೂ ಮುದ್ರಣ : ಅಕ್ಷರೋದ್ಯಮ, ಮಂಗಳೂರು

## ಈ ಸಂಚಿಕೆಯಲ್ಲಿ .....

### ಶರದ್ ಸಂಭ್ರಮ


- ಮಂಜೀರ ........ 4
- ನುಡಿ ನಮನ ಅಂಜಲಿ : ಮುಕ್ತಾಯಕ್ಕೆ ಮುನ್ನ ನಿರ್ಗಮಿಸಿದ ನಾಟ್ಯತಪಸ್ವಿನಿ ........ 7
- ಲಲಿತ ಲಹರಿ : ಸಹಸ್ರ ತಂತ್ರೀ ನಿಃಸ್ವನದಂತೆ ........ 10
- ನರ್ತನ ಸುರಭಿ : ನೃತ್ಯ– ಅಂದು, ಇಂದು, ಮುಂದು ........ 11
- ಹಸ್ತ ಮಯೂರಿ : ಮೃಗಶೀರ್ಷ ಹಸ್ತ ........ 14
- ಒಳನೋಟ ........ 17
- ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ ........ 19
- ರಂಗಸ್ಥಳ : ಚಿಟ್ಟಾಣಿ ಅಭಿನಯ ನೋಡಿ ಶಹಬ್ಬಾಸ್ ಎಂದಿದ್ದರು ರಾಜ್ ! ........ 21
- ನಿಮ್ಮ ಬರೆಹ ನಮ್ಮ ಓದು ........ 23
- ಮುದ್ರಾರ್ಣವ ........ 25


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own and not of Noopura Bhramari.
Visit Our website : **www.noopurabhramari.com**
for the latest news, views and other updates.
ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು ಪ್ರತೀ ತಿಂಗಳ 20 ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.







## ಮಂಜೀರ

ಹೀಗೆ., ಒಂದು ಅಧ್ಯಯನ ಸಾಮಗ್ರಿಗೆ ಹುಡುಕುವಾಗ ಮೊದಲು ಕಂಡಿದ್ದು ಜನಪದ. ಅದರಲ್ಲೂ ಜಾನಪದ ನೃತ್ಯಗಳು. ಶತಶತಮಾನದಿಂದ ಜನಜೀವನದಲ್ಲಿ ಹಾಸುಕೊಕ್ಕಾಗಿ, ಹಲವು ಪಲ್ಲಟಗಳಿಗೆ ಸಾಕ್ಷಿಯಾಗಿ, ಯಾವುದೇ ಆಗ್ರಹಗಳನ್ನೂ ಕಟ್ಟಿಕೊಳ್ಳದೆ, ನಿತ್ಯವಿನೂತನವಾಗಿ ತನ್ನ ಹೆಜ್ಜೆ–ಗೆಜ್ಜೆಗಳಲ್ಲಿ ಮನಸುಗಳ ಅರಳುವಿಕೆಯನ್ನೂ ಸಾಧಿಸಿಕೊಂಡವುಗಳು ಅವು. ಅಷ್ಟೇ ಅಲ್ಲ, ಇಂದಿನ ಎಲ್ಲಾ ಶಾಸ್ತ್ರೀಯವೆನಿಸುವ ನೃತ್ಯಗಳು ಒಂದಾನೊಂದು ಕಾಲದಲ್ಲಿ ಜನಪದದಿಂದ ಬಂದವುಗಳೇ ಆಗಿವೆ. ಇಂತಹ ಸಮೃದ್ಧಭರಿತ ಸಾಂಗತ್ಯದಲ್ಲಿ ಶಾಸ್ತ್ರೀಯ ನೃತ್ಯಗಳೊಂದಿಗೆ ಪರಸ್ಪರ ಪ್ರಭಾವ–ಅನುಭಾವಗಳ ಬೆಸುಗೆ ಇಂದಿಗೆ ಯಾವ ತೆರನದ್ದು ಎಂದು ಹುಡುಕಿ ಹೊರಟಾಗ ಪ್ರಸಕ್ತ ರೀತಿಗೆ ಸಂವಾದಿಯಾಗಿ ತೆರೆದುಕೊಂಡಿದ್ದೇ ಪ್ರಾದೇಶಿಕ ಮತ್ತು ಜಾನಪದ ನೃತ್ಯಗಳ ಸೃಜನಶೀಲ(?) ನಕಲು !

ಒಂದಾನೊಂದು ಕಾಲಕ್ಕೆ ಕಲಾಪ್ರವರ್ತಕರು ಕೆಲವೊಂದು ನೃತ್ಯಗಳನ್ನು ಶಾಸ್ತ್ರೀಯತೆಯ ಚೌಕಟ್ಟಿಗೆ ಒಳಪಡಿಸಿ ಸ್ಥಾನ ಕೊಟ್ಟ ಮೇಲೆ ನಾನಾ ಕಾರಣಗಳಿಂದ ಅವುಗಳ ಕುರಿತಾಗಿ ಇದ್ದ ನಿಕೃಷ್ಟ ಧೋರಣೆಗೆ ಪೂರ್ಣವಿರಾಮ ಬಿದ್ದದ್ದು ಆಗಲೇ. ಅದರಲ್ಲೂ ನೃತ್ಯ ಸುಧಾರಕರು ಕಲಾಕ್ಷೇತ್ರದ ಅನುಭವಿಗಳು ಈ ಮರ್ಮ ಅರಿತೇ ಜನಪದ ಸಂಸ್ಕೃತಿಯನ್ನು ಒಂದಷ್ಟು ಶಾಸ್ತ್ರೀಯವೆನಿಸುವ ಮಟ್ಟಿಗೆ ಒಗ್ಗಿಸಿಕೊಂಡಿದ್ದರು. ಅದು ಒಂದರ್ಥದಲ್ಲಿ ಪುನರುಜ್ಜೀವನವೂ ಹೌದು. ಜೊತೆಗೆ ಸಮಾನ ಒಲವು, ಸಂಸ್ಕಾರ, ಸಮೃದ್ಧಿ, ಕಲೆಯ ವಿಶಾಲ ಪ್ರಪಂಚದೆಡೆಗೆ ಅಭ್ಯಾಸಿಗಳ ಸಮ್ಯಕ್ ದೃಷ್ಟಿಯನ್ನು ಹರಿಸಲು ಮಾಡಿದ ಪ್ರಯತ್ನವೂ ಹೌದು. ಹಾಗಾಗಿಯೇ ಕೊರವಂಜಿಗಳೆಲ್ಲಾ ಪ್ರದರ್ಶನದ ಒಂದು ಭಾಗವೇ ಆಗಿ, ಶಾಸ್ತ್ರೀಯತೆಯ ಹೂರಣದೊಳಗೆ ಒಪ್ಪ–ಓರಣವಾಗಿ ಸ್ಥಾನ ಕಂಡುಕೊಂಡಿತು. ಕ್ರಮೇಣ 'ಶಾಸ್ತ್ರೀಯ ಸ್ಪರ್ಶದ ಜನಪದ ಮನೋಭೂಮಿಕೆ'ಯೇ ಆಗಿಹೋಯಿತು. ಇಂದಿಗೂ ಹಲವು ನೃತ್ಯಪ್ರದರ್ಶನಗಳಲ್ಲಿ ಕೊರವಂಜಿಯ ಕರಾಮತ್ತು, ಕೈಚಳಕಗಳಿವೆ.

ಕಾಲ ಸರಿದಂತೆ ಹತ್ತು ಹಲವು ಪ್ರಯೋಗಗಳಿಗೆ, ಕಲಿಕೆಗೆ ಜಾನಪದ ರಂಗ ತನ್ನನ್ನು ಯಾವುದೇ ಬೇಡಿಕೆಗಳಿಲ್ಲದೆ ಸಮರ್ಪಿಸಿಕೊಂಡಿತು. ಒಂದರ್ಥದಲ್ಲಿ ಜಾನಪದದ ಮಹತ್ವ ತಿಳಿಯದ ಶಾಸ್ತ್ರೀಯ ನೃತ್ಯದ ಬಳಕೆದಾರರ ಅಗತ್ಯವೆನಿಸುವ ಸಾಮಗ್ರಿಯೂ ಆಗಿ ! ಕಾಲನ ಮೂಸೆಯಲ್ಲಿ ಎಲ್ಲವೂ ಅಡಗಿ ಹೋಗುವಂತೆ ಭರತನಾಟ್ಯದ ಬಾಹುಗಳಲ್ಲಿ ಉಳಿದ ದೇಸೀ ನೃತ್ಯಗಳ ಸಹಜತೆ ಮರೆಯಾಗಿ ಮಾಯವಾಗುತ್ತಿದೆ ಎಂಬಲ್ಲಿಯವರೆಗೆ ! 'ನಮ್ಮದು ಶಾಸ್ತ್ರೀಯ, ಗೊತ್ತುಗುರಿ ಇಲ್ಲದ ಜಾನಪದವನ್ನು ಹೇಗೆ ಬಳಸಿಕೊಂಡರೂ ನಡೆಯುತ್ತದೆ' ಎಂಬ ಉಡಾಫೆಯ ತನಕ ! ಇದರ ಫಲ ; ಖಾಸಗೀಕರಣ, ಉದಾರೀಕರಣ, ಜಾಗತೀಕರಣದಂತೆ 'ಎಲ್ಲವೂ ಭರತನಾಟ್ಯೀಕರಣ' !

ಕುಚೋದ್ಯವೆನಿಸೀತು. ಆದರೆ ಇದು ಇಂದಿನ ವಾಸ್ತವ.

ಹೌದು. ಎಲ್ಲಾ ನೃತ್ಯಗಳಲ್ಲೂ ಭರತನಾಟ್ಯದ ಪ್ರಭಾವ ಎದ್ದು ತೋರುತ್ತಿದೆ. ಯಕ್ಷಗಾನಾದಿಯಾಗಿ ಬಳಕೆಯಲ್ಲಿರುವ ಎಲ್ಲಾ ಜನಪದ–ಪ್ರಾದೇಶಿಕ ನೃತ್ಯಗಳನ್ನು ಭರತನಾಟ್ಯವೆಂಬ ಕಬಂಧ ಬಾಹು ಸೆಳೆದು ಅರಿವಿಲ್ಲದಂತೆಯೇ ನುಂಗಿಹಾಕುತ್ತಿದೆ. ಜನಪದ ನೃತ್ಯಗಳ ಚೀತ್ಕಾರ ಎಲ್ಲೋ ಮೂಲೆಯಿಂದೆದ್ದು ಅಲ್ಲೇ ಸುಖಾಸುಮ್ಮನೆ ಅಡಗಿಹೋಗುತ್ತಿದೆ.

ಭರತನಾಟ್ಯದ ಪರವಾಗಿ ವಾದಿಸುವವರಿಗೆ 'ಅದು ಆ ನೃತ್ಯಪ್ರಕಾರದ ಶಕ್ತಿ ಮತ್ತು ಸೌಂದರ್ಯಾನುಭೂತಿ'. ಆದರೆ ಯಾವುದೇ ಕಲೆ ಇನ್ನೊಂದು ಕಲೆಯನ್ನು ಬಲಿ ತೆಗೆದುಕೊಳ್ಳಲಾರದು ಎಂಬುದೂ ಒಂದು ವಾಸ್ತವ ಸತ್ಯ. ಒಂದೊಮ್ಮೆ ಕಾಲಾಂತರಗಳಲ್ಲಿ ಬಲಿ ತೆಗೆದುಕೊಂಡರೂ ಅದು ಮತ್ತೊಂದು ಕಲೆಯ ಅಸ್ತಿತ್ವದ ಗಟ್ಟಿತನದ ಪ್ರಶ್ನೆಯೂ ಅದರಲ್ಲಡಗಿರುತ್ತದೆ. ಆದರೆ, ಇದನ್ನೂ ಹಾಗೆಂದುಕೊಂಡು ತೆಪ್ಪಗಾದಿರೋ, ಎಚ್ಚರಿಕೆಯ ಕರೆಗಂಟೆ ಮತ್ತೊಮ್ಮೆ ಮೊಳಗದಿರುವಷ್ಟು ಕಾಲಗರ್ಭದೊಳಗೆ ಸೇರಿಹೋಗುತ್ತದೆ. ಅದು ನಿರಂಕುಶ ಪ್ರಭುತ್ವದೆಡೆಗೆ ತಲೆತಗ್ಗಿಸಬೇಕಾದ ಸಲಾಮು. ಒಂದರ್ಥದಲ್ಲಿ ಗುಲಾಮತನವೂ !

ಹಾಗಾದರೆ ಸೌಂದರ್ಯಾನುಭೂತಿ ಇರುವುದು ಹೌದೇ ? ಅಥವಾ ಅದೂ ಕೂಡಾ ಮಾಯಾಪೂತನಿಯೇ?

ಎಲ್ಲವೂ ನಾವಂದುಕೊಂಡಂತಿಲ್ಲ ಎಂದು ಅರಿವಾಗುವುದು ಆಗಲೇ !

ಇಲ್ಲಿ ಸಮಸ್ಯೆಯಿರುವುದು ಜಾನಪದದ್ದಲ್ಲ, ಭರತನಾಟ್ಯವೂ ಅಲ್ಲ. ಅದರ ಅಂತಃಸತ್ವವನ್ನು ಅರಿಯದೆ ಅನುಕರಿಸುವ ಕಲಾವಿದರಲ್ಲಿ, ಶಿಕ್ಷಕರಲ್ಲಿ, ವಿದ್ಯಾರ್ಥಿಗಳಲ್ಲಿ ಮತ್ತು ವಿಭಿನ್ನ ನೆಲೆಗಟ್ಟಿನಲ್ಲಿ ಅನುಸರಿಸುವ ಮಾಧ್ಯಮಗಳಲ್ಲಿ. ಅವರಿಗೆ ಭರತನಾಟ್ಯವೆಂಬುದು ಪ್ರಚಾರದ ತಂತ್ರ. ಜೊತೆಗೆ ವೀಕ್ಷಕರಿಗೊಂದು ಬಲೆ ಬೀಸುವ ಮಂತ್ರ. ಜೊತೆಗೆ ಜಾನಪದವು ಕಾಲಕಳೆಯುವ ಒಂದು ಪ್ರತಿಷ್ಠೆಯ ವಸ್ತು. ಅದಕ್ಕೊಂದು ಸುಂದರವಾದ ಹೆಸರು 'ಫ್ಯೂಷನ್' !

ಕೂಚಿಪುಡಿಯ ಹರಿವಾಣ–ಚೆಂಬಿನ ಸಾಂಪ್ರದಾಯಿಕ ನೃತ್ಯ ಭರತನಾಟ್ಯದಲ್ಲಿ ನೃತ್ತ–ನೃತ್ಯ–ಅಭಿನಯವಿಲ್ಲದ ಕ್ಯಾಂಡಲ್ ದೀಪಗಳ ಸಾಹಸದ ನಡುವೆ ಕಸರತ್ತು, ವ್ಯಾಯಮಗಳ ಚಪ್ಪಾಳೆ ಗಿಟ್ಟಿಸುವ ಮಹೋನ್ನತ(?) ಸಾಂಪ್ರದಾಯಿಕ ಫ್ಯೂಷನ್ ಆಗಿದ್ದು ಹೀಗೆಯೇ ! ಎಷ್ಟರಮಟ್ಟಿಗೆ ಪರಿಣಾಮಕಾರಿ ಎಂದರೆ ನಕಲು ಎಂದು ತಿಳಿಯದ ಮಟ್ಟಿಗೆ ! ಈಗಲೂ ಶ್ರೀಸಾಮಾನ್ಯರು ಅಚ್ಚರಿಯಿಂದ ಎಳೆಯರನ್ನು, ಯುವ ನೃತ್ಯಪಟುಗಳನ್ನು ಪ್ರಶ್ನಿಸುವುದನ್ನು ಕೇಳಿದ್ದೇನೆ ; 'ದೂಪಾರತಿ ಕಲಿತಿಲ್ಲವಾ?'.

ಹಾಗಂತ ಫ್ಯೂಷನ್ ಎಂದಾಕ್ಷಣ ಅಸಡ್ಡೆಯ ಓರೆನೋಟ ಬೇಕಿಲ್ಲ. ಆ ಪ್ರಪಂಚದಲ್ಲಿಯೂ ಅರ್ಥಗರ್ಭಿತ ನಿರೂಪಣೆಗಳಿವೆ, ಅದರದ್ದೇ ಆದ ಸಾಧ್ಯತೆ, ಆನಂದ, ವಿಸ್ತಾರ, ಮಿತಿ, ಒಳಿತು ಮತ್ತು ಅಪಾಯಗಳಿವೆ. ಅದರ ಕುರಿತು ಮತ್ತೊಮ್ಮೆ ಚರ್ಚಿಸಿಯೇನು.

ಇದರ ಜೊತೆಗೆ, ಸಾಂಪ್ರದಾಯಿಕ ಶಾಸ್ತ್ರೀಯ ನೃತ್ಯಪ್ರದರ್ಶನಗಳಲ್ಲೂ ಸಹಜವೆಂಬಂತೆ ಜಾನಪದ ನೃತ್ಯಗಳ ಬಳಕೆ ಸಾಮಾನ್ಯವಾಗಿದೆ. ಆ ಮಟ್ಟಿಗೆ ನಮ್ಮ ಶಾಸ್ತ್ರೀಯ ಕಲಾವಂತರೂ(?) ಒಂದು ಕಾಲಕ್ಕೆ ಜಾನಪದವೆಂದರೆ ಮೂಗುಮುರಿಯುತ್ತಿದ್ದವರು ಈಗ ಡೊಳ್ಳು ಕುಣಿತ, ವೀರಗಾಸೆ, ಕಂಸಾಳೆ, ಕೋಲಾಟ, ಕರಗ, ಬೆಸ್ತರ ನೃತ್ಯ, ಸುಗ್ಗಿ ನೃತ್ಯ, ಹಳ್ಳಿಯ ಕುಣಿತಗಳನ್ನು ಆರಾಮವಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಮಹಾರಾಷ್ಟ್ರ, ಅಸ್ಸಾಂ, ಬಿಹಾರ, ಪಂಜಾಬ್ ಮುಂತಾದ ಸಾಂಪ್ರದಾಯಿಕ ಮತ್ತು ಬುಡಕಟ್ಟು ಜನಾಂಗದ ನೃತ್ಯಗಳು 'ಕಾಪಿರೈಟ್'ನ್ನು ಯಾವಾಗಲೋ ಬಿಟ್ಟುಕೊಟ್ಟಂತಾಗಿದೆ. ಜೊತೆಗೆ ಅದಕ್ಕೊಂದು 'ಪ್ರೊಫೆಷನಲ್ ಟಚ್' ಎಂಬ ಸೀಮೋಲ್ಲಂಘನ ಮಾಡುವ ಗರ್ವ !

ಜಾನಪದ ನೃತ್ಯಗಳಿಗೆ ಇದು ಒಳ್ಳೆಯ ವೇದಿಕೆಯೂ ಹೌದು ಎಂದುಕೊಂಡಿರೋ ಒಮ್ಮೆ ಇಣುಕಿ ; ಮನದಾಳದ ಹುಳುಕುಗಳು ಒಂದೊಂದಾಗಿ ಹೊರಬೀಳುತ್ತವೆ– 'ಶ್ರೀಸಾಮಾನ್ಯನಿಗೆ





ಚೇಂಜ್ ಸಿಗುತ್ತದೆ ! ಭರತನಾಟ್ಯದಲ್ಲಿ ಬೋರು ಹೊಡೆಯುವಾಗ(?) ಫ್ರೆಶ್ ಆಗುತ್ತದೆ. ಒಮ್ಮೊಮ್ಮೆ ಮಕ್ಕಳನ್ನು ವೇದಿಕೆಗೆ ಹತ್ತಿಸಲು ಇದೊಂದು ಕಾರಣ'. ಕಾರಣ ಇಷ್ಟೇ ! ಪ್ರದರ್ಶನದ ನಡುವೆ ಪ್ರೇಕ್ಷಕರು ಕಣ್ಬಿಟ್ಟು ನೋಡುವ ಸಲುವಾಗಿಯೋ, 'ಢಿಫರೆಂಟ್' ಅನ್ನಿಸಿಕೊಳ್ಳಲಿಕ್ಕೋ, ಆಕರ್ಷಣೆಗೋ, ವಿನೋದಕ್ಕೋ, ಸಮಯ ಹರಣಕ್ಕೋ ! ; ಅಚ್ಚರಿಯಾದರೂ ಸತ್ಯ.

ತಮ್ಮ ಕೊರತೆಗಳನ್ನು ಮುಚ್ಚಿ ಹಾಕಲು ಬೇರೆಯವರ ಎರವಲು ಪಡೆಯುತ್ತಿದ್ದೇವೆ. ಕುಣಿಯಲು ಬಾರದ ನರ್ತಕಿ ನೆಲ ಡೊಂಕು ಎಂದಿದ್ದು ಮಾತ್ರವಲ್ಲ, ತನ್ನಷ್ಟೇ ಸಂಪದ್ಭರಿತ ಮತ್ತೊಂದು ಕಲೆಯನ್ನು ಅನಾಮತ್ತಾಗಿ ಎತ್ತಿ ತನ್ನ ಮಾತ್ರ ನೆಲೆಗೂ, ಅನುಕರಿಸಿದ ಕಲೆಗೂ ಯೋಗ್ಯತೆಯೇ ಇಲ್ಲವೆಂದು ಮಾಡುವ ಕುತ್ಸಿತ ಹುನ್ನಾರ !

ಹಾಗಾದರೆ ಇದರಿಂದ ಹಾನಿ ಯಾರಿಗೆ? ನೃತ್ಯಪ್ರದರ್ಶನದಲ್ಲಿ ನಷ್ಟ ಯಾರಿಗೆ? ಮೌಲ್ಯ ಕಡಿಮೆಯಾಗುವುದು ಭರತನಾಟ್ಯದ್ದೋ, ಜಾನಪದ ನೃತ್ಯಗಳದ್ದೋ? ಆಲೋಚಿಸಿ.

ನಂಬುತ್ತೀರಾ! ವಿಷಾದವೋ, ಸಂಭ್ರಮವೋ ಒಟ್ಟಿನಲ್ಲಿ ಇಂತಹ ಪ್ರದರ್ಶನಗಳು ಹೆಚ್ಚಾಗಿ ಜರುಗುತ್ತಿರುವುದು ಕರ್ನಾಟಕದ ಕಲಾವಿದರಲ್ಲೇ !

ಸಾಕಷ್ಟು ಬಾರಿ ನೃತ್ಯ ಶಾಲೆಗಳು, ಅಕಾಡೆಮಿಗಳು, ಕೇಂದ್ರಗಳು ಅಲ್ಲಲ್ಲಿ ಜಾನಪದ ನೃತ್ಯದ ಕುರಿತ ಕಾರ್ಯಾಗಾರಗಳ ಮೂಲಕ ಕಲಾವಂತರಿಗೆ ಶಿಕ್ಷಣ ಕೊಡುವುದನ್ನು ನೋಡುತ್ತೇವೆ. ಆಯಾಯ ವಿಭಾಗದಲ್ಲಿನ ಪರಿಣತರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳುವುದೂ ಇದೆ. ಅಲ್ಲಿಯವರೆವಿಗೂ ಎಲ್ಲವೂ ಚೆಂದ. ಆದರೆ ಅದರಾಚೆಗೆ ತಮಗನಿಸಿದಂತೆ ಕಲೆಯ ಹರಹುಗಳಲ್ಲಿ ಕೈಯ್ಯಾಡಿಸಿ 'ಮತ್ತಷ್ಟು ಆಕರ್ಷಕ ಮಾಡುತ್ತೇನೆ' ಎಂಬ ಕೈಚಳಕವಿದೆಯಲ್ಲಾ, ಅದೇ ರೇಜಿಗೆ ಹುಟ್ಟಿಸುವುದು.

ಇದ್ದದ್ದನ್ನು ಇದ್ದ ಹಾಗೇ ಒಪ್ಪಿಕೊಳ್ಳುವುದರಲ್ಲೇನಿದೆ ತಪ್ಪು? ಅದೇ ಅಲ್ಲವೇ ಕಲೆಯೆಡೆಗಿನ ಪ್ರೀತಿ ಎಂದರೆ ? ತಮಗನಿಸಿದಂತೆ ಬದಲಾವಣೆಗಳನ್ನು ಮಾಡಿಕೊಂಡರೆ ಅಧಿಕಾರವೆನಿಸಿಕೊಂಡೀತೆ ಹೊರತು ಪ್ರೀತಿಯೆಂದಾದೀತೇ? ಶಾಸ್ತ್ರೀಯ ನೃತ್ಯ ಕಲಾವಿದರು ಜಾನಪದ ನೃತ್ಯಗಳಿಗೂ ಶಾಸ್ತ್ರೀಯ ನೃತ್ಯದ ಹೆಜ್ಜೆಗಳು, ಬಾಗುವಿಕೆ–ಬಳುವಿಕೆಗಳನ್ನು ಹೇರಿ ವೈವಿಧ್ಯಮಯತೆ ಪ್ರದರ್ಶಿಸಲು ಹೊರಟರೆ ಜಾನಪದದ ಸಹಜತೆಯನ್ನೇ, ಸಾಂಪ್ರದಾಯಿಕತೆಯನ್ನೇ ಧಿಕ್ಕರಿಸುವುದು ಎಂದರ್ಥವಲ್ಲವೇ? ಎಲ್ಲಿದೆ ಸಹಜತೆಗೆ ಗೌರವ?

ಇತರ ಸಂಸ್ಕೃತಿಯೆಡೆಗೆ ಸೌಹಾರ್ದಯುತ ದೃಷ್ಟಿ, ಅದರ ಅಭ್ಯಾಸ, ಪ್ರದರ್ಶನ ಒಳ್ಳೆಯದೇ. ಆದರೆ ಯಾವ ಮಟ್ಟದಲ್ಲಿ ಮಾಡುತ್ತಿದ್ದೇವೆ, ಕಲೆಯೊಂದಕ್ಕೆ ನ್ಯಾಯ ಒದಗಿಸಲು ಶಕ್ತರೇ ಎಂದು ಯೋಚನೆ ಮಾಡಲು ಎಷ್ಟು ಮಂದಿ ಸಿದ್ಧರಿದ್ದಾರೆ? ಕಲೆಯೊಂದರ ಆಳ–ಅಗಲಗಳನ್ನು ಸ್ವಲ್ಪವಾದರೂ ಅರಿಯದೇ ಮೇಲ್ಕಂಡ ಅಂಶಗಳನ್ನಷ್ಟೇ ಬಾಚಿಕೊಂಡು ಕೊಲ್ಲುವುದು ಯಾವ ಬಗೆಯ ಪುರುಷಾರ್ಥಕ್ಕೆ?

ಪ್ರೀತಿಯಿಂದ,

✍ ಸಂಪಾದಕರು

manorama@noopurabhramari.com

# ನುಡಿ-ನಮನ-ಅಂಜಲಿ



ಶ್ರೀಮತಿ ಸುಂದರೀ ಸಂತಾನಂ





# ಮುಕ್ತಾಯಕ್ಕೆ ಮುನ್ನ ನಿರ್ಗಮಿಸಿದ ನಾಟ್ಯತಪಸ್ವಿನಿ

ಕಲೆ ಕೆಲವರಿಗೆ ಖಯಾಲಿ. ಕೆಲವರಿಗೆ ಗೀಳು. ಕೆಲವರಿಗೆ ಪ್ರತಿಷ್ಠೆ. ಕೆಲವರಿಗೆ ಐಡೆಂಟಿಟಿ. ಕೆಲವರಿಗೆ ಕಾಲಹರಣ. ಕೆಲವರಿಗೆ ಪ್ರದರ್ಶನ. ಕೆಲವರಿಗೆ ತಪಸ್ಸು. ಒಬ್ಬ ವ್ಯಕ್ತಿಯನ್ನು ಆವರಿಸಿಕೊಳ್ಳುವುದಕ್ಕೆ ಕಲೆಗೆ ಎಲ್ಲಾ ಚಹರೆ-ಚಪಲತೆಗಳೂ ಇರುತ್ತವೆ. ಆದರೆ ತನ್ನ ಆಯ್ಕೆ-ಆಶಯ-ಕಲಾಸ್ವರೂಪದ ಅನನ್ಯತೆಯ ಬಗ್ಗೆ ವಿಸ್ಮಯಗಳನ್ನು ಉಳಿಸಿಕೊಂಡು, ಸಾಧ್ಯತೆಯ ಆಳಕ್ಕೆ ಪಾತಾಳಗರಡಿ ಹಾಕಿ ಶೋಧಿಸುತ್ತಲೇ ಸಾಯುವ ಶ್ರದ್ಧಾವಂತರು ತಮ್ಮ ಜೀವಮಾನವಿಡೀ ಕಲಾಸೂಕ್ಷ್ಮದ ಸಿದ್ಧಿಗಾಗಿ ತಪಸ್ಸು ಮಾಡುತ್ತಲೇ ಇರುತ್ತಾರೆ. ಅಂತಹ ತಪೋಜೀವಿಕೆ ಶ್ರೀಮತೀ ಸುಂದರೀ ಸಂತಾನಂ ಅವರದು.

ಇತ್ತೀಚೆಗಷ್ಟೇ (೨೪ ಆಗಸ್ಟ್ ೨೦೦೯) ತಮ್ಮ ಜೀವನ-ನೃತ್ಯರಂಗದಲ್ಲಿ ಬೆಳ್ಳಿಗೆಜ್ಜೆ ಬಿಚ್ಚಿಟ್ಟು ಇಹಲೋಕಕ್ಕೆ ವಿದಾಯ ಹೇಳಿ ಕೃತಜ್ಞತೆಯ ಪುಷ್ಪಾಂಜಲಿ ಸಲ್ಲಿಸಿ ನಿರ್ಗಮಿಸಿದ ಭರತನೃತ್ಯ ಕಲಾವಿದೆ ಸುಂದರೀಸಂತಾನಂ ಅವರಿಗೆ ನೃತ್ಯಕಲೆ ವಂಶವಾಹಿಯಾಗಿ ಬಂದ ಬಳುವಳಿ ಅಲ್ಲ. ಚೆನ್ನೈವಾಸಿಗಳಾದ ಅರುಣಾಚಲಂ-ಚೆಲ್ಲಮ್ಮಾಳ್ ಮಗಳಾದ ಸುಂದರಿಗೆ ಹುಟ್ಟಿನಿಂದ ರಕ್ತದೊಟ್ಟಿಗೆ ಹರಿದದ್ದು ವೀಣಾಧುನಿ. ಅದಕ್ಕೆ ತಾಯಿ ಸಂಗೀತಜ್ಞೆಯಾದದ್ದೇ ಕಾರಣ. ಸಂಗೀತವೂ ನೃತ್ಯವೂ ಒಂದೇ ಕುಟುಂಬದ ಕುಡಿಯಾದ್ದರಿಂದಲೋ ಏನೋ ತನ್ನ ಅಕ್ಕ ಉಮಾಶ್ರೀರಾಮ್ ಹಾಕುತ್ತಿದ್ದ ನೃತ್ಯದ ಹೆಜ್ಜೆ, ಸುಂದರಿಯ ಕಾಲಲ್ಲಿ ಗೆಜ್ಜೆದನಿ ಮೂಡಿಸಿತು. ಪೂರ್ವಪುಣ್ಯ ಎಂಬಂತೆ ಪದ್ಮಾಸುಬ್ರಹ್ಮಣ್ಯಂ ಅವರ ಗುರುತನವೂ ನಾಟ್ಯದ ನೋಂಪಿಗೆ ಗುರುತಾಗಿ ದೊರಕಿತು. ಹನ್ನೆರಡರ ಹರೆಯದಲ್ಲಿ ವೀಣೆಯ ಮೆಟ್ಟಿಲಲ್ಲಿ ಕೈಯೂ ನೃತ್ಯದ ಮೆಟ್ಟಿಲಲ್ಲಿ ಕಾಲೂ ಕುಣಿಯತೊಡಗಿತು. ಕ್ರಮೇಣ ವೀಣೆಯಿಂದ ಜಾರಿದ ಬೆರಳು ಪೂರ್ತಿಯಾಗಿ ನೃತ್ಯದ ಹಸ್ತಕಲಾಪಕ್ಕೆ ಮುಡಿಪಾಯಿತು. ಸಂಗೀತಕ್ಷೇತ್ರಕ್ಕೆ ಇದೊಂದು ಕೊರೆಯಾದರೂ ನಾಟ್ಯಕ್ಷೇತ್ರದ ಶಾಸ್ತ್ರೀಯ ಶೋಧನೆಯ ನವಾಂಕುರಕ್ಕೆ ನಾಂದಿಯಾಯಿತು.

ಅಭಿನವ ಭರತ ಎಂಬ ಸಾರ್ಥಕ ಪ್ರಶಸ್ತಿಗೆ ಭಾಜನರಾದ ಡಾ.ಪದ್ಮಾಸುಬ್ರಹ್ಮಣ್ಯಂ ಮೊದಲಿಂದಲೂ ಭರತನ ನಾಟ್ಯಶಾಸ್ತ್ರದ ತಥ್ಯಾನ್ವೇಷಣೆಯಲ್ಲಿ ಏಕಲಕ್ಷ್ಯದಿಂದ ನಿಶ್ಚಲನಿಷ್ಠೆಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದವರು. ರೂಢಮೂಲ ಪದ್ಧತಿಗೂ ಭರತನಿಗೂ ಸಮನ್ವಯ ಕಾಣುವುದಿಲ್ಲವೆಂದು ಮನವರಿಕೆಯಾಗುತ್ತಿದ್ದಂತೆ ಸಮಗ್ರನಾಟ್ಯಶಾಸ್ತ್ರದ ಗಂಭೀರ ಅಧ್ಯಯನಕ್ಕೆ ತೊಡಗಿ, ನೃತ್ಯಪ್ರಯೋಗದಲ್ಲಿ ಭರತಮಾರ್ಗವನ್ನು ರೂಪಿಸುವ ಛಲ ತೊಟ್ಟಿದ್ದರು. ಅವರ ಪ್ರಯೋಗಶಿಲ್ಪದ ಮೊನಚು ಚಾಣದ ಒರಟು ಸುತ್ತಿಗೆಯ ನಿರ್ಘಾತಕ್ಕೆ ಮೈಯಾದವರು ಸುಂದರೀಸಂತಾನಂ. ನಾಟ್ಯಶಾಸ್ತ್ರದ ಪದ್ಮಾಭಾಷ್ಯಕ್ಕೆ ಅಕ್ಷರಶಃ ಹಗಲಿರುಳು ಅನ್ನಾಹಾರನಿದ್ರೆ ತೊರೆದು ತಮ್ಮನ್ನು ತೇದುಕೊಂಡರು. ಅದರ ಪರಿಣಾಮವೇ ಭರತನ ನಾಟ್ಯಶಾಸ್ತ್ರದ ಕರಣವಿಭಾಗಕ್ಕೊಂದು ವ್ಯಾಕರಣ ನಿರ್ಮಾಣವಾಗಿ ಪದ್ಮಾ ಅವರಿಂದ ಮಹಾಸಂಪ್ರಬಂಧ (ಪಿಎಚ್ ಡಿ) ಹೊರಬಂತು.

ಪದ್ಮಾ ಅವರಂತೆ ಶೈಕ್ಷಣಿಕವಾಗಿ ಪ್ರಬುದ್ಧವಾದ ಹಿನ್ನೆಲೆ ಸುಂದರಿಯವರಿಗೆ ಇರಲಿಲ್ಲವಾದರೂ, ಸೂಕ್ಷ್ಮಗ್ರಹಿಕೆ ಜನ್ಮಜಾತವಾಗಿ ಬಂದದ್ದರಿಂದ ಗುರುವಿನ ನಾಟ್ಯಕ್ರಮಣದ ಪ್ರತಿಹಂತವೂ ಸುಂದರಿಗೆ ಶ್ವಾಸಗತವೇ ಆಗಿಬಿಡುತ್ತಿತ್ತು. ಇದರಿಂದಲೇ ಈ ಗುರುಶಿಷ್ಯರ ಜೋಡಿ ಜರ್ಮನಿಯ ಅಂತಾರಾಷ್ಟ್ರಿಯ ನೃತ್ಯೋತ್ಸವದಲ್ಲಿ(೧೯೭೦) ಸಿಂಗಾಪುರದ ಕಲೋತ್ಸವದಲ್ಲಿ (೧೯೮೨) ಗ್ರೀಸ್ ನೃತ್ಯೋತ್ಸವದಲ್ಲಿ (೧೯೮೩) ಭಾರತವನ್ನು ಪ್ರತಿನಿಧೀಕರಿಸಿತು. ಪದ್ಮಾ ಅವರ ಹಲಕೆಲವು ರಂಗರಚನೆಯ ವಿನ್ಯಾಸ ಕೊರಿಯೋಗ್ರಫಿ ಪೂರ್ಣಶಃ ಸುಂದರಿಯ ಸ್ವತಂತ್ರ ನಿರ್ವಹಣೆಗೆ ಒಳಪಡುತ್ತಿತ್ತು. ತಾವೇ ಪೂರ್ತಿಯಾಗಿ ರಂಗರೂಪ ಸಿದ್ಧಪಡಿಸಿ ನಿರ್ದೇಶಿಸಿ ಪ್ರಸ್ತುತಪಡಿಸಿದ

ರಾಜರಾಜಚೋಳ ಎಂಬ ನೃತ್ಯನಾಟಕ ಸುಂದರಿಯವರ ನಾಟ್ಯಶಾಸ್ತ್ರಾಭಿಜ್ಞತೆಗೆ ಒಂದು ನಿತಾಂತ ನಿದರ್ಶನ. ಈಚಿನ ಇಪ್ಪತ್ತೈದು ವರ್ಷಗಳಿಂದ ಬೆಂಗಳೂರಲ್ಲೇ ನೆಲೆಸಿ ಕನ್ನಡಿಗರೇ ಆಗಿಹೋಗಿದ್ದ ಸುಂದರಿಯವರಿಗೆ ನೃತ್ಯ ಒಂದು ತಪಸ್ಸು. ಹಣ ಹೆಸರು ಗಳಿಕೆಗಳತ್ತ ಅಗಳಿ ಹಾಕಿ ಮನೋಬುದ್ಧಿದೇಹ ಸಾಮರ್ಥ್ಯವನ್ನು ಗುರೂಪದಿಷ್ಟವಾದ ಮಾರ್ಗದಲ್ಲಿ ನಾಟ್ಯಶಾಸ್ತ್ರದ ಒಳಸುಳಿಗಳ ಸೌಂದರ್ಯದ ಶಿಲ್ಪನಿರ್ಮಾಣದ ಸಂಶೋಧನೆಯಲ್ಲಿ – ತಮ್ಮ ಆರೋಗ್ಯವನ್ನು ನಿರ್ದಯವಾಗಿ ಒತ್ತೆಯಿಟ್ಟು – ತೊಡಗಿಸಿಕೊಂಡಿದ್ದರು.

ಕಾಲಪುರುಷ ಕ್ಯಾನ್ಸರಿನ ಮುಂಗಡ ನೋಟೀಸು ಜಾರಿ ಮಾಡಿದ್ದು ತಿಳಿದೂ ದೇಹ ದಿನೇದಿನೇ ಕರಗುತ್ತಿದ್ದರೂ ಭಾಗ್ಯವನ್ನು ಬೈಯದೇ, ದೈವವನ್ನು ದೂಷಿಸದೇ ಪಾಪವೆಂದು ಪರಿತಪಿಸದೇ ಕ್ಯಾನ್ಸರಿನ ಮೃತ್ಯುಮಾಲಿಕೆಯನ್ನು ಧರಿಸಿಯೇ ನಂದದ ಕಲಾನಂದದ ಮಂದಹಾಸದಲ್ಲಿ, ಐತಿಹಾಸಿಕ ಎನಿಸುವ ಘಟನೆಗಾಗಿ ಸುಂದರಿ ಗೆಜ್ಜೆ ಕಟ್ಟಿದರು. ಅದು ಕರಣವಿನಿಯೋಗಮಾಲಿಕಾ ಎಂಬ ಡಾಕ್ಯುಮೆಂಟರಿಗಾಗಿ. ಗುರು ಪದ್ಮಾ ಕಂಡರಸಿದ ಕರಣಗಳ ವಿನಿಯೋಗದ ನೃತ್ಯಸಾಧ್ಯತೆಗಳ ಕುರಿತಾದ ಸ್ವಂತ ಶೋಧ. ಸುಂದರಿಯವರನ್ನು ಕಲಾಲೋಕದಲ್ಲಿ ಶಾಶ್ವತವಾಗಿ ನೆಲೆಗೊಳಿಸಿದ ಧ್ರುವಸಿದ್ಧಿ– ಕರಣವಿನಿಯೋಗಮಾಲಿಕಾ. ದೇಶವಿದೇಶಗಳಲ್ಲೂ ಇದರ ಡಿವಿಡಿ ಇವರನ್ನು ಜೀವಂತಗೊಳಿಸಿದೆ.

ಕಲೆಯಲ್ಲಿ ನಿತ್ಯಕುತೂಹಲಿಯಾಗಿದ್ದ ಬಾಲಸಹಜ ಉತ್ಸಾಹ ಹೊಂದಿದ್ದ ಸುಂದರಿ ಯಕ್ಷಗಾನದ ಹೆಜ್ಜೆಗಾರಿಕೆಗೆ ಖುಷಿಪಟ್ಟು, ಪಟ್ಟುಹಿಡಿದು ಕಲಿತು ಕೇದಗೆಮುಂದಲೆ ಕಸೆ ಕಟ್ಟಿ ಮೀಸೆ ತೀಡಿ ನಲನಾಗಿ ನಲಿದದ್ದೂ ಒಂದು ಆದರ್ಶವೇ. ಈ ನೃತ್ಯಗಾತಿಯ ಒಳಗೆ ಒಬ್ಬ ಲೇಖಕಿಯೂ ಹಲಗೆ–ಬಳಪ ಹಿಡಿದು ಕಾಯುತ್ತಿದ್ದವಳು ; ಪದ್ಮಾ ಅವರ ಜೀವನಕಥೆ ಬರೆವ ಮೂಲಕ ಹೊರತೋರಿದ್ದಾಳೆ. ಪದ ಕುಸಿಯೆ ನೆಲವಿಹುದೆಂದು ಪ್ರಬಲವಾಗಿ ನಂಬಿದ್ದ ಸುಂದರಿ ಅಸ್ತಮಾನದ ಮಬ್ಬುಗತ್ತಲಲ್ಲಿ ಬಣ್ಣಹಚ್ಚಿ ಗೆಜ್ಜೆ ಘಲ್ಲಿಸಿದ್ದು, ಅವರ ಜೀವಮಾನದ ಮಹತ್ವಾಕಾಂಕ್ಷೆಯ ಅಸೀಮ ಸಂಶೋಧನೆಯ ದೇಸೀಕರಣಕ್ಕಾಗಿ. ಕರ್ನಾಟಕದ ದೇವಾಲಯದ ಗೋಡೆಗಳ ಜೀರ್ಣಸಾಲಭಂಜಿಕೆಗಳನ್ನು ಕಂಡು ಅಧ್ಯಯನ ಮಾಡಿ ೧೦೮ ದೇಸೀ ಕರಣಗಳನ್ನು ನಿರೂಪಿಸಿದ್ದರು. ಆ ಕುರಿತು ಮಹಾಪ್ರಬಂಧದ ರಚನೆಗೂ ತೊಡಗಿದ್ದರು. ಕ್ಯಾನ್ಸರಿನ ವಿಕಿರಣ ಚಿಕಿತ್ಸೆಯಿಂದ ಎಲುಬು ರಕ್ತ ಮಾಂಸ ನರ ನಾಡಿಗಳೆಲ್ಲ ಯುದ್ಧರಂಗದ ಪ್ರೇತಭೂಮಿಯಾಗಿದ್ದರೂ ಲ್ಯಾಪ್‌ಟಾಪ್ ಎದೆಯ ಮೇಲಿಟ್ಟುಕೊಂಡು ಅದುರುವ ತೋರ್ಬೆರಳಿನಲ್ಲಿ ಅಕ್ಷರ ಅಕ್ಷರವನ್ನು ಜೋಡಿಸಿ ನಿಟ್ಟುಸಿರಲ್ಲಿ ನಗೆ ಹಾಯಿಸುತ್ತಿದ್ದರು. ದೇಸೀಕರಣಕ್ಕೆ ಸಂಬಂಧಿಸಿದಂತೆ ಶಾಸ್ತ್ರಭಾಗ ಪೂರ್ಣಗೊಳಿಸಿದ್ದರೂ ಪ್ರಯೋಗದ ಭಾಗ ಮುಕ್ಕಾಲು ಬಾಕಿಯಾದ ಕುರಿತು ಕಳವಳವಿತ್ತು. ದೇಸೀಕರಣ ಪೂರ್ಣಮಾಡದೆ ತಾನು ಸಾಯುವುದಿಲ್ಲ ಅಂತ ಭೇಟಿ ಅದಾಗಲೆಲ್ಲಾ ಸಾವನ್ನು ಛೇಡಿಸುತ್ತಿದ್ದರು. ಆದರೆ ಮರಣ ಮೃದಂಗದ ನಡೆಯ ಮುಕ್ತಾಯ ನಾಟ್ಯಮೃದಂಗದಷ್ಟು ಮೃದುವೂ ಅಲ್ಲ ಮೋಹಕವೂ ಅಲ್ಲ.

ಮುಂದಿನ ಕಲಾಕ್ಷೇತ್ರದ ಆಸಕ್ತ ವಿದ್ಯಾರ್ಥಿಗಳಿಗೆ ಜನ್ಮಕ್ಕಾಗುವಷ್ಟು ಸಂಶೋಧನ ಸಾಮಗ್ರಿಯನ್ನು ಕೈಮೊಗೆದು ನೀಡಿ ಕಣ್ಣುಮುಚ್ಚಿದ ಸುಂದರೀಸಂತಾನಂ ಅವರಂಥ ನಾಟ್ಯೋಪಾಸಕರು ನಾಟ್ಯತಪಸ್ವಿಗಳು ವಿರಳಾತಿವಿರಳ. ನೆತ್ತರು ಬಸಿದು ಅವರು ಅನ್ವೇಷಿಸುತ್ತಿದ್ದ ನಾಟ್ಯಶಾಸ್ತ್ರೀಯ ಶೋಧನೆಯ ಹೆದ್ದೇರಿನ ಮಿಳಿ ಹಿಡಿದು ಸಾಧ್ಯವಾದಷ್ಟೂ ದೂರ ಸಂಭ್ರಮದಿಂದ ಕ್ರಮಿಸುವಂತೆ ಶಿಷ್ಯಲೋಕ ಕೈಜೋಡಿಸಿದರೆ ಗತಿಸಿದ ಕಲಾವಿದೆಯ ಕನಸಿಗೊಂದು ಕಳೆ ಬರುತ್ತದೆ. ಕಲೆ ಇರುತ್ತದೆ.

– **ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ**

**(ಲೇಖಕರು ಖ್ಯಾತ ಚಿಂತಕರು, ವಿಮರ್ಶಕರು)**





**ಏನೋ ತಿಳಿಯದು ! ಆಗಸವೇ ತೂತಾಗಿರಬಹುದೇ ಎಂಬಂತೆ ಎಲ್ಲೆಲ್ಲಿಯೂ ಮಳೆಯ ಅಖಂಡನಾದ ಮೊರೆದಿದೆ. ಕೊಚ್ಚಿಹೋದ ಕಾಲ–ಕಾರಣಗಳಿಗೆ ಸಾಕ್ಷಿಯಾಗಿ ಅದರ ಹನಿಗಳು ಇನ್ನೂ ಜೀವಂತವಿವೆ. ವರ್ಷ ಋತುವಿನ ಹರ್ಷ ಧಾರೆಯ ಬೆನ್ನಿಗೇ ಶರದ್ ಸಂಭ್ರಮಕ್ಕೆ ಅಚ್ಚರಿಯೆಂಬಂತೆ ದೃಷ್ಟಿಬೊಟ್ಟನ್ನಿಟ್ಟಿದೆ. ಈ ಸಂಕ್ರಾಂತಿಕಾಲಕ್ಕೆ ದೃಷ್ಟಿಯನ್ನಿಡೋಣ ; ಒಮ್ಮೆ ಭವಿಷ್ಯದ ಭರವಸೆ ಮತ್ತು ಆತಂಕಗಳ; ದ.ರಾ.ಬೇಂದ್ರೆಯವರ 'ಅರಳು ಮರಳು' ಕವನಸಂಕಲನದಿಂದಾಯ್ದ 'ಸಹಸ್ರತಂತ್ರೀ ನಿಃಸ್ವನದಂತೆ' ಓದಿನೊಂದಿಗೆ...!**

## ಲಲಿತ ಲಹರಿ

– ದ. ರಾ. ಬೇಂದ್ರೆ

ಸಹಸ್ರತಂತ್ರೀ ನಿಃಸ್ವನದಂತೆ
ಮಾತರಿಶ್ವನಾ ಘನಮನದಂತೆ
ಗುಡುಗಾಡುತ್ತಿದೆ ಗಗನದ ತುಂಬ
ಪ್ರಣವ ಪ್ರವೀಣನ ನಾದಸ್ತಂಭ.

ಏಕದಿಂದಲೇ ಉದಿಸಿದೆ ಸರ್ವ
ಐಕ್ಯ ಶರಿಸಿಯೇ ಆಳುವನೋರ್ವ
ಆ ಓರ್ವನೊಳೇ ಸರ್ವವು ಸೇರಿ
ಜಯವನು ಸಾರಲಿ ಧರ್ಮದ ಭೇರಿ

ದದದಾ ದದದೋಂ ದಮುದಯ ದತ್ತೋಂ
ದಿಕ್ತಟ ತಟವಟ ಧಿಗಿದಂ ಧಿಕ್ತೋಂ
ನಿರ್ದ್ವಂದ್ವದೊಳೆದ್ದಿತು ಓಂ ನಾದ
ತಾಂಡವೇಶ್ವರನ ಅಖಂಡವಾದ

ಸತಿಮುಖಸುಸ್ಮಿತ ಜನಿತ ಸುವೇದ
ಶರಣಾನ ಚಿದ್ಗತಿ ಶರಣ್ಯವೇಧ
ಮಧುರಾ ಭಕ್ತಿಯ ಮಧುರಾ ಗೀತ
ವೇಣುಧ್ವನಿಯಲಿ ಆತ್ಮಪ್ರೀತ

ಮಾನವ–ದಾನವ–ದೇವ ದೇವತಾ
ಯುಗಯುಗ ಗರ್ಭಿತ ಜೀವ ಜೀವಿತಾ
ಮೂರ್ತಿತವಾಗಲಿ ಪ್ರಾರ್ಥನೆಗಾಗಿ
ಉದ್ಭವ ಭವಿಷ್ಯ ಸಾರ್ಥಕವಾಗಿ

ಸಹಸ್ರಾರವಿಂದೋತ್ಥಿತಬಾಲೆ
ಬ್ರಹ್ಮಹೃದಯರತಿ ಸುಷುಪ್ತ ಜ್ವಾಲೆ
ಏನಿದೆ ? ಏನಿದೆ? ಏನಾಮೇಲೆ?
ಕೃಪಾಪುಷ್ಪಗಳ ಅನಂತಮಾಲೆ

ಧರ್ಮಮೇಘವೇ ವರ್ಷಿಸುವಂತೆ
ಸತ್ಯದ ಸತ್ವವ ಸ್ಪರ್ಶಿಸುವಂತೆ
ಧರಣಿಯ ಕೆಚ್ಚೆಲು ಹರ್ಷಿಸುವಂತೆ
ಬರಲಿದೆ ಮಳೆ ಉದ್ಘರ್ಷಿಸುವಂತೆ

# ನರ್ತನ ಸುರಭಿ 'ನೃತ್ಯ– ಅಂದು, ಇಂದು, ಮುಂದು'

**ನಾಟ್ಯಾಚಾರ್ಯ ಕೆ. ಮುರಲೀಧರರಾಯರ 'ನೃತ್ಯಲೋಕ' ಗ್ರಂಥವನ್ನು ಅರಿಯದ ನೃತ್ಯಾಸಕ್ತರು ಬಹಳ ಕಡಿಮೆ. ಹಾಗೆ ನೋಡಿದರೆ, ಜ್ಞಾನವೃದ್ಧರೂ, ವಯೋವೃದ್ಧರೂ ಆದ ರಾಯರು ನಮ್ಮ ನಡುವಿನ ನಡೆದಾಡುವ ಗ್ರಂಥವೇ ಹೌದು. ಎಂಭತ್ತನಾಲ್ಕನೇಯ ವಯಸ್ಸಿನಲ್ಲೂ ಅವರ ಉತ್ಸಾಹ ಇಪ್ಪತ್ತರ ತರುಣರನ್ನೂ ನಾಚಿಸುವಂತಹುದು. ನಿಸರ್ಗ, ಸಂಗೀತ, ಸಾಹಿತ್ಯ, ಚಿತ್ರಕಲೆ, ಛಾಯಾಚಿತ್ರ ಕಲೆ, ನರ್ತನ.., ಹೀಗೆ ಶ್ರೀಯುತರ ಬಹುಮುಖವೆನಿಸುವ ವಿದ್ವತ್ತು, ಅಗಾಧ ಪಾಂಡಿತ್ಯ, ಬೋಧನಾನುಭವ, ಜೀವನದರ್ಶನ.., ಎಂಥಹ ಸಾಧಕರಿಗೂ ಭವಿಷ್ಯ ಸಾಧ್ಯತೆಗಳ ಚಿಂತನಕ್ಕೆ ಒಂದು ಉತ್ತಮ ಆಕರ. ಅವರ ಚಿಂತನ–ಮಂಥನಗಳ ಸೌಹಾರ್ದ ಸಂಧಿಸುವಿಕೆ ನಮ್ಮೆಲ್ಲರ ಜ್ಞಾನ ಪರಿವ್ರಾಜನೆಗೆ ಸೂಕ್ತ ಸಮಯವನ್ನೀಯುತ್ತದೆ. ನಮ್ಮ ಓದಿನೊಂದಿಗೆ, ಈ ಸಿಂಹಾವಲೋಕನ, ಭವಿಷ್ಯದ ಕ್ರಿಯೆ–ಪ್ರತಿಕ್ರಿಯೆಗಳಲ್ಲಿ ಅವರು ಜೊತೆಗಿರುತ್ತಾರೆ. ಆದ್ದರಿಂದ ಅವರ ಲೇಖನಿಯಿಂದ ಚಿಮ್ಮಿದ ಸಾಲುಗಳ ಅಂಕಣ ಲೇಖನ : 'ನೃತ್ಯ– ಅಂದು, ಇಂದು, ಮುಂದು'– ಈ ಸಂಚಿಕೆಯಿಂದ ನಿಮಗಾಗಿ !**



ಯಾವ ಕಲೆಯೂ ಅಥವಾ ಕಲಾಭಿವ್ಯಕ್ತಿಯೂ ಶೂನ್ಯದಲ್ಲಿ ಹುಟ್ಟುವುದಿಲ್ಲ. ಅಥವಾ ವಿರಳವಾಗಿ ಹುಟ್ಟಿಕೊಂಡರೂ ಜಗತ್ತಿನಲ್ಲಿ ದೀರ್ಘಕಾಲ ಮುಂದುವರಿಯುವುದಿಲ್ಲ ; ಪರಂಪರೆಯನ್ನಂತೂ ಉಂಟುಮಾಡುವುದಿಲ್ಲ. ಉದಾ : ಕ್ರೌಂಚವಧೆಯ ದಾರುಣ ಸನ್ನಿವೇಶ. ಅದು ಒಬ್ಬ ವ್ಯಾಧ ತಪಸ್ವಿಯನ್ನು ಆದಿಕವಿ ವಾಲ್ಮೀಕಿಯನ್ನಾಗಿ ಉತ್ಥಾನಗೊಳಿಸಿತು. ಫಲವಾಗಿ ರಾಮಾಯಣವೆಂಬ ಫಲ. ಅಂತೆಯೇ ಭಾರತೀಯ ಸಂಸ್ಕೃತಿಯ ಅಖಂಡಧಾರೆ ಅಥವಾ ಎಳೆಯಾಗಿ ಮಹಾಭಾರತದಂತಹ ಮಹಾಕಾವ್ಯಗಳೂ, ವೇದ–ಉಪನಿಷತ್ತು, ಧಾರ್ಮಿಕ–ಬೌದ್ಧಿಕ ಕೃತಿಗಳೂ ಪರಂಪರೆಯನ್ನು ಸೃಷ್ಟಿಸಿವೆ.

ಇಂದಿನ ಭೋಗಜೀವನದಲ್ಲಿ ಭಾರತೀಯತೆ ಉಳಿದು, ಬೆಳಗಿ, ನಳನಳಿಸುತ್ತಾ ಇರುವುದು ಈ ಪರಂಪರೆಗಳ ಭವ್ಯತೆಗೆ ಸಾಕ್ಷಿ. ಆರ್ಷೇಯ ಭರತನಾಟ್ಯ ಇದೇ ಪರಂಪರೆಗಳ ಒಂದು





ಶಾಖೆ. ಇದರಲ್ಲಿ ವೇದಸಾರವಿದೆ. ಉಪನಿಷತ್ ಬೋಧನೆಯಿದೆ. ರಾಮಾಯಣ–ಮಹಾಭಾರತ–ಭಾಗವತ–ಪುರಾಣಗಳಂತೂ ಇದರ ಜೀವಂತ ದೇಹವೇ ಆಗಿದೆ. ಸಂಗೀತ–ಸಾಹಿತ್ಯ– ನರ್ತನ– ಅಭಿನಯ ಮತ್ತು ಭಾವೋನ್ಮೇಷ ಎಂಬ ಪಂಚ ಸೃಜನಶೀಲ ಸ್ಫೂರ್ತಿಗಳ ಸಂಗಮವಿದು.

'ಈಗೇನೋ ನಮ್ಮ ದೃಷ್ಟಿಯಲ್ಲಿ ನಾಟ್ಯ–ನೃತ್ಯ ತುಂಬಾ ಸುಧಾರಿಸಿದೆ' ಎಂಬ ಹೊರನೋಟ ಕಂಡರೂ, ಸಮಾಜದಲ್ಲಿ ಕಲಾವಿದರು ನಾಟ್ಯದ ಉತ್ತಮ ಅಂಶ ಬಿಟ್ಟು ಪ್ರಾಪಂಚಿಕ ಮನೋಭಾವ ಬೆಳೆಸುವುದನ್ನು ನೋಡುತ್ತಿದ್ದೇವೆ. ಅಂತಾರಾಷ್ಟ್ರೀಯ ಮಾದರಿಯಲ್ಲಿ ನಾಟ್ಯದ ಬದಲು 'ಕುಣಿತ' ಕಾಣುತ್ತಿದ್ದೇವೆ. ಇಲ್ಲಿ ನಮಗೆ ಬೇಕಾದುದು 'ಶಾಸ್ತ್ರೀಯ ವಿಮೋಚನೆ' !

ಕಲೆ ವಿಲಾಸಕ್ಕಾಗಿ ನಡೆಯಬೇಕಾಗಿಲ್ಲ. ಜೀವನದ ವಿಕಾಸವೇ ಅದರ ಗುರಿ ! ಆದರೆ ಸಂಸ್ಕೃತಿ ನಷ್ಟವಾದರೆ ರಾಷ್ಟ್ರವೇ ಅಧಃಪತನಕ್ಕೆ ಜಾರುತ್ತದೆ !

*****

ಆ ಕಾಲ ಹಿಂದಿನದು .....!

ಭಾರತೀಯ ಸಂಸ್ಕೃತಿಯಲ್ಲಿ ನಾಟ್ಯ ಅತ್ಯಂತ ಪ್ರಿಯವಾದ ಕಲೆ ಎನಿಸಿತ್ತು. ಭಾವನಿರೂಪಣೆಯನ್ನು ತೋರಿಸುವ ಉಚ್ಚ ಸಂಪ್ರದಾಯವನ್ನು ಹೊಂದಿತ್ತು. ಆದರೆ ಅದೇ ಆ ಪ್ರವೃತ್ತಿ ಇಂದಿನವರಿಂದ ಅವಹೇಳನಕ್ಕೆ ಗುರಿಯಾಗುವ ಸಂದರ್ಭದಲ್ಲಿ 'ಅದು ಪ್ರಾಚೀನ'– ಎಂದರೆ, ಬಳಕೆಯಲ್ಲಿ ಮುಂದುವರಿಯದದ್ದು ಎಂದೋ ಅಥವಾ 'ಇಂದಿನ ಪ್ರಕೃತ ದೃಷ್ಟಿಯಲ್ಲಿ ಅಪ್ರಸಕ್ತ' ಎಂದೋ ಅಭಿಪ್ರಾಯ ಕೇಳಿಸುತ್ತಿದೆ. ಹಾಗಾಗಿ ನೃತ್ಯದ ಅಧೋಗತಿಯನ್ನು ಕಂಡವರು ಕೇಳುವ ಪ್ರಶ್ನೆಯಿದು : ' ಈ ನಾಟ್ಯಕಲೆಯಲ್ಲಿ ಪ್ರದರ್ಶನವೀಯುವ ಹಾಗೂ ಅದರಲ್ಲಿ ಅಭಿನಯಿಸುವ ಕಲಾಗಾರರಲ್ಲಿ ನಾವು ಹಿಂದೆ ಕಂಡ ಲಕ್ಷಣವಂತರು ಇದ್ದಾರೆಯೋ?'

ಆ ಪ್ರಶ್ನೆಗೆ ಉತ್ತರ ಹೇಳಲು ಹೊರಟರೆ ಕೆಲವು ಉದಾಹರಣೆಗಳನ್ನು ಕೊಡಲೇಬೇಕು. ನಮ್ಮ ಸಮಾಜದಲ್ಲಿ ಕಾಣಿಸುವವರಲ್ಲಿ:–

ಮೊದಲನೇಯದು – ಗುರುಗಳಿಂದ ನೃತ್ಯಕಲೆ ಕಲಿತು ಮುಂದಕ್ಕೆ ತಮ್ಮಲ್ಲಿ ವ್ಯಾಸಂಗಕ್ಕೆ ಬಂದಿರುವವರಿಗೆ ವಿದ್ಯೆ ಹೇಳಿ ಕೊಡುವವರು ; ತಾವು ಕಲಿತದ್ದರಲ್ಲಿ ಕಿಂಚಿತ್ತೂ ಮಾರ್ಪಾಟು ಮಾಡದೆ, 'ಗುರುಗಳು ಹೇಳಿಕೊಟ್ಟದ್ದೇ ದೊಡ್ಡದು, ಅವರ ಪ್ರಪಂಚವೇ ದೊಡ್ಡದು' ಎಂಬ ಒಣಭ್ರಾಂತಿ ಹೊಂದಿರುವವರು,

ಸಾಂಪ್ರದಾಯಿಕ ಕ್ರಮದಲ್ಲಿ ಹೊಸಜಗತ್ತನ್ನೇ ತಾವು ಕಂಡು ಅದನ್ನು ಧಾರೆಯೆರೆಯುತ್ತಾ ಇರುವವರೇ ಎರಡನೇಯವರು. ಇವರು ಪ್ರಪಂಚವನ್ನು ಸ್ವಲ್ಪ ಕಂಡಿದ್ದಾರೆ ನಿಜ ; ಆದರೆ ಅಲ್ಲಿಯೂ ಒಂದಿಷ್ಟು ಬೇರು ಕಾಣದ ಸ್ಥಿತಿಯಲ್ಲಿದ್ದಾರೆ ; ಯಾವ ರೀತಿಯಲ್ಲಿ ಹೇಳಿದರೆ ಒಳ್ಳೆಯದು ಎಂಬ ಭಾವನೆ ಇರದೆ ಹೆಸರಿಗೆ ಮಾತ್ರ ಗುರುತಿಸಿಕೊಂಡವರು,

ತಮ್ಮ ಪ್ರದರ್ಶನಗಳಲ್ಲಿ ನಾಯಕ– ನಾಯಿಕಾ ಭಾವಗಳ ವಿಚಾರ ಬಿಟ್ಟು, ಭಕ್ತನಾದವನೂ ದೇವನಿಗೆ ಅರ್ಪಿಸುವ ಭಕ್ತಿಯೇ ನಿಜವಾದ ಶೃಂಗಾರವೆಂದು ಹೇಳಿಕೊಡುವವರು ಮೂರನೇ ವರ್ಗದವರು ; ಅಂದರೆ ಶೃಂಗಾರವನ್ನು ಸೇರಿಸುವ ಬದಲು ಭಕ್ತರ ಆರಾಧನೆ ಮಾತ್ರ ಎನ್ನುವವರು,

ನಾಲ್ಕನೆಯವರು ಬುದ್ಧಿವಂತರು. ಅಭಿನಯ ಭಾಗದಲ್ಲಿ ಪಳಗಿ ಅದನ್ನು ಪ್ರದರ್ಶಿಸುವವರು. ಒಂದು ವಿಶೇಷೋದ್ದೇಶಕಾಗಿ ಬಾಹ್ಯ ವಸ್ತುಗಳ ಪ್ರತಿಮೆಗಳನ್ನು ಕಲ್ಪಿಸಿ, ಅದನ್ನು ತಮ್ಮ ವಿದ್ಯೆಯಲ್ಲಿ ಸೇರಿಸುವ ಮನಃಶ್ಯಕ್ತಿಯನ್ನು ಹೊಂದಿದವರು. ಸಂಪ್ರದಾಯದಲ್ಲಿ ಹೊಸ ಆಯಾಮವನ್ನು ಕಂಡುಹಿಡಿವವರು ಇವರು. ಶೃಂಗಾರದಲ್ಲಿ ಹೊಸಹಾದಿ, ಸಾಹಿತ್ಯಾಭಿರುಚಿಯಲ್ಲಿ ದಿನದಿನವೂ ಹೊಸ ಮಾರ್ಪಾಟುಗಳನ್ನು ಕಲ್ಪಿಸಿ ತಾವು ಕಲಿತ ವಿದ್ಯೆಯಲ್ಲಿ ಅದನ್ನು ಕಾಣಿಸುವ ರೀತಿಯಲ್ಲಿ ಹೇಳುತ್ತಿರುವವರು.

ಜೊತೆಗೆ, ಸಂಪ್ರದಾಯದಲ್ಲಿ ಆಂಗಿಕ ವಿಧಿಯನ್ನು ಮಾತ್ರ ಹೇಳಿಕೊಟ್ಟು ಉಳಿದವು ಪ್ರಧಾನವಲ್ಲವೆಂದು ತಿಳಿಸಿ, ಅದರಲ್ಲಿ ಚಪ್ಪಾಳೆ ಗಿಟ್ಟಿಸುವ ಭೂಪರು ಬೇರಿದ್ದಾರೆ.

ಕಂಪ್ಯೂಟರ್‌ಗಳನ್ನು ನಂಬಿ, ಮುಂದಕ್ಕೆ ತಮಗೆ ಗುರುವೇ ಬೇಡವೆನ್ನುವವರ ಸ್ಥಿತಿ ಹೇರಳವಾಗಿ ಇದೆ.

ಏಕವ್ಯಕ್ತಿ ಪ್ರದರ್ಶನಕ್ಕಿಂತ ನಾಟ್ಯವಾಡುವವರ ಗುಂಪನ್ನೇ ನಿರ್ಮಿಸುವವರೂ ಇದ್ದಾರೆ.

ಹೊಸದಾರಿ ತಮ್ಮದು. ರಾಜಕೀಯ ಅಥವಾ ಧಾರ್ಮಿಕ ಸಭೆಯಲ್ಲಿ ಪ್ರದರ್ಶನವನ್ನು ಮಾಡಿಸುತ್ತಾ, ಒಟ್ಟಿನಲ್ಲಿ ಹಾಡಿಗೂ, ನಾಟ್ಯಕ್ಕೂ ಉದ್ದೇಶಕ್ಕೂ ತಾಳೆಯಿರದೆ ಸಾಹಿತ್ಯಿಕ ಗೀತೆಗಳಿಗೆ ಪ್ರಚಾರಕ್ಕಾಗಿ ಹೆಜ್ಜೆ ಹಾಕಿಸುವವರು ನಮ್ಮ ನಡುವೆ ಇದ್ದಾರೆ.

'ತಾವು ನಾಟ್ಯವನ್ನು ಬಲ್ಲವರು' ಎನ್ನುತ್ತಾ ಶೈಲಿಯ ಕುರಿತು ಮಾತನಾಡುವ ಯಾವ ಹೊಂದಿಕೆಯೂ ಇಲ್ಲದ ಜನರು ನಮ್ಮಲ್ಲಿದ್ದಾರೆ.

ದೂರದಿಂದ ನರ್ತಿಸಬಂದ ಹಲಕೆಲವು ಉತ್ತಮ ಅಥವಾ ಮಧ್ಯಮ ಕಲಾವಿದರ ನರ್ತನ ಶೈಲಿ ಕಂಡು ಅಂತಹುದನ್ನೇ ತಮ್ಮ ರೀತಿಯಲ್ಲಿ ನಕಲು ಮಾಡಿ ಪ್ರದರ್ಶಿಸುವ ಸೋಮಾರಿಗಳು ಇದ್ದಾರೆ.

ಪ್ರದರ್ಶನ ಏರ್ಪಡಿಸುವಾಗ ಕಲೆಯ ನೆವದಲ್ಲಿ ಹಣಸಂಪಾದನೆ, ಕೀರ್ತಿ ಕಾಮನೆಗಳಿಂದ ದಿನದೂಡುವವರೂ ನಮ್ಮ ನಡುವಿನ ಸ್ನೇಹಿತರೇ !

ಪ್ರದರ್ಶನ ಕೊಡಿಸುವಾಗ ಕೈಯ್ಯಲ್ಲಿ ಕೊಳೆತ ಹಣವನ್ನು ನೀರಿನಂತೆ ಖರ್ಚು ಮಾಡುವವರೂ, ತಮ್ಮ ಮಕ್ಕಳ ಪ್ರದರ್ಶನಕ್ಕಾಗಿ ವಿಮರ್ಶೆ ಕೊಡುವವರೂ– ಕೊಡಿಸುವವರೂ, ರಂಗಸ್ಥಳದಿಂದ ' ದಯವಿಟ್ಟು ಚಪ್ಪಾಳೆಯಿಕ್ಕಿ' ಎಂದು ಬೇಡುವವರೂ ಇದ್ದಾರೆ. ಚಪ್ಪಾಳೆ ತಟ್ಟಿದ್ದಾರೆ ನಮ್ಮ ಜನ. ಆದರೆ 'ಯಾಕೆ ಈ ಚಪ್ಪಾಳೆ' ಎಂದು ಕೇಳಿದರೆ ಅವರಲ್ಲಿ ಉತ್ತರವಿಲ್ಲ. ■





# ಮೃಗಶೀರ್ಷ ಹಸ್ತ



## ಹಸ್ತ ಮಯೂರಿ

**ಲಕ್ಷಣ: ಸರ್ಪಶಿರದ ಕಿರು ಮತ್ತು ಹೆಬ್ಬೆರಳನ್ನು, ಮೇಲಕ್ಕೆ ನೀಡಿ, ಉಳಿದ ಬೆರಳುಗಳನ್ನು ಮಧ್ಯಭಾಗ ನೇರವಾಗಿ ಬಗ್ಗಿಸುವುದು. ಮೃಗಶೀರ್ಷವೆಂದರೆ ಜಿಂಕೆ0ಯು ತಲೆ ಎಂದರ್ಥ. ನರ್ತನ ನಿರ್ಣ0ಯದಲ್ಲಿ ಇದನ್ನು 'ಗೋಮುಖ ಹಸ್ತ' ಎನ್ನುತ್ತಾರೆ.**

**ಗೌರಿಯು ಮದನದಹನದ ಬಳಿಕ ಶಿವನನ್ನು ಅರಾಧಿಸುವಾಗ, ಭಸ್ಮಲೇಪಕ್ಕೆ ವಿನಿಯೋಗಿಸಿದ ಹಸ್ತವಿದು. ಇದು ಸ್ತ್ರೀ ಹಸ್ತಗಳ ಪೈಕಿ ಒಂದು. ಋಷಿ ವರ್ಣ, ಬಿಳಿ ಬಣ್ಣ, ಋಷಿ : ಮಾರ್ಕಾಂಡೇಯ, ಅಧಿದೇವತೆ : ಮಹೇಶ್ವರ.**

ಒಡಿಸ್ಸಿಯಲ್ಲಿ ಮೃಗಶೀರ್ಷವನ್ನು ಹಂಸಪಕ್ಷವೆಂದೂ, ಮಣಿಪುರಿ ನೃತ್ಯದಲ್ಲಿ ಧೇನುವೆಂದೂ ಕರೆಯುತ್ತಾರೆ. ಕಿರು ಮತ್ತು ಹೆಬ್ಬೆರಳನ್ನು ನಿಡಿದಾಗಿರಿಸಿ ಉಳಿದ ಬೆರಳನ್ನು ನೇರವಾಗಿ (180 ಕೋನದಲ್ಲಿ) ಬಗ್ಗಿಸುವ ಮೃಗಶೀರ್ಷ ವಿನ್ಯಾಸದ **ಪಾಶ ಮುದ್ರಾ** ಶಾಸ್ತ್ರೀಯ ಧಾರ್ಮಿಕ ವಿಧಿಗಳಲ್ಲಿ ಮುಖ್ಯವಾದುದು.

ವಿನಿ0ಯೋಗ: ಸ್ತ್ರೀ, ಕೆನ್ನೆ, ರಥದ ಚಕ್ರ, ಗೌರವ ಸೂಚನೆ, ಭ0ಯ, ವಾದಮಾಡುವುದು, ನೇಪಥ್ಯ, ಇರುವ ಸ್ಥಳ, ವಿಭೂತಿ ಧಾರಣೆ, ಭೇಟಿ (ಎದುರು ಬದುರಾಗುವಿಕೆ), ರಂಗೋಲಿ ಹಾಕುವುದು, ಕಾಲು ಒತ್ತುವುದು, ಎಲ್ಲವನ್ನು ಸೇರಿಸುವಿಕೆ, ಮನೆ, ಛತ್ರಿ ಹಿಡಿ0ಯುವುದು, ಮೆಟ್ಟಿಲು, ಹೆಜ್ಜೆ ಇಡುವಿಕೆ, ಪ್ರೀತಿಯಿಂದ ಕರೆ0ಯುವುದು, ನಡೆ0ಯುವುದು, ಜಿಂಕೆ ಅಥವಾ ಮೃಗ ಮುಖ.

ಇತರೆ ವಿನಿ0ಯೋಗ: 'ಇಲ್ಲಿ', 'ಇದೆ', 'ಈಗ ಸಾಧ್ಯ'ವೆನ್ನುವುದು, 0ಯೋಗ್ಯ, ದಾಳವನ್ನೆಸೆ0ಯುವುದು, ಅಳತೆ ಮಾಡುವುದು, ಬೆವರನ್ನು ಒರೆಸುವುದು, ಗಂಧ ಲೇಪನ, ಪರದೆ, ಅತಿಮಾನುಷ ಶಕ್ತಿಗಳನ್ನು ಸ್ತುತಿಸುವುದು ಅಥವಾ ತೃಪ್ತಿಪಡಿಸುವುದು, ಆಜ್ಞೆ, ಯೋಚಿಸುವುದು, ತನ್ನನ್ನು ಸೂಚಿಸುವುದು, ದೇಹ, ಸಂಜ್ಞಾಭಾಷೆ, ಋಷಿ ಜಾತಿ, ಬಿಳಿ ಬಣ್ಣ, ಸೂಕ್ತವಾದ ಸಮಯ ಅಥವಾ ಅವಕಾಶ, ಮಂದ, ಇಂದು, ಸಮರ್ಥ, ಉಲ್ಲಾಸ, ಮೊಲ, ಇದು, ಕೋಪ ಮುಚ್ಚಿಡುವುದು, ಕೂದಲು ಕೆದರು, ಹಣೆ0ಯ ಬೆವರು ಒರೆಸುವುದು, ಬರೆವ ಲೇಖನಿ ಹಿಡಿ0ಯುವುದು, ಭಸ್ಮಲೇಪನಕ್ಕೆ ಉಪ0ಯೋಗಿಸುವುದು, ಮಿಥ್ಯಾಕೋಪ, ಕ್ರಮ, ದಪ್ಪ ಹೊಟ್ಟೆ ತೋರಿಸುವುದು, ವಸ್ತ್ರ, ತಿರಸ್ಕಾರ, ಮಕ್ಕಳಿಗೆ ತಿಳಿ0ಯಹೇಳುವುದು, ಮುಂಗುರಳನ್ನು ಸರಿಪಡಿಸುವುದು, ಸನ್ಮಾರ್ಗ ಪ್ರದರ್ಶನ, ಅಂಗೀಕಾರ, ಸರಸ–ಸಲ್ಲಾಪ, ಕುಳ್ಳ, ಸೂ0ರ್ಯನನ್ನು ನೋಡುವುದು, ಬೋಧಿಸುವುದು, 'ಮೆಲ್ಲಗೆ ಮಾತನಾಡು' ಎನ್ನುವುದು, ಗೋಡೆ, 0ಯುದ್ಧ, ಶಾಂತಿ, ದೇವರು, ಹಿಂದಕ್ಕೆ ಬಾ ಎಂದು ಕರೆ0ಯುವುದು, ಶಿವಲಿಂಗ ಧರಿಸುವುದು, ಬಾಲಕ, ನಾಚಿಕೆ, ಶಕ್ತ್ಯಾ0ಯುಧದ ಠೇಂಕಾರ ಮಾಡಲು, ಬಾಣಗಳನ್ನು ಒಗೆ0ಯಲು, ಕಾಲಿಗೆ ರಂಗನ್ನು ಹಚ್ಚಿಕೊಳ್ಳುವುದು, ಮೃಗಾಸನ(ಜಿಂಕೆಯ ಚರ್ಮದಿಂದ ರಚಿಸಿದ್ದು), ವಿವಿಧ ಬಗೆಯ ಯೋಚನೆ–ಭಾವಗಳನ್ನು ತೋರಿಸುವುದು, ದೂರದಿಂದ ಹತ್ತಿರ ಕರೆಯುವುದು, ಪ್ರಿ0ಯನನ್ನು ತಿರಸ್ಕರಿಸುವ

ಸೋಗುಮಾಡುವಾಗ, ಗೌರಿ0ಯು ಮದನದಹನದ ಬಳಿಕ ಶಿವನನ್ನು ಆರಾಧಿಸುವಾಗ, ನಾಲ್ಕು ನಾಯಕಿಯರ ಬಣ್ಣನೆಗೆ ಬಳಕೆ0ಯಾಗುತ್ತದೆ.

‘ದೀರ್ಘಾಯುವಾಗು’ ಎಂಬ ಆಶೀರ್ವಾದ, ಸಣ್ಣ ವಸ್ತು, ಕಳ್ಳ, ಶರಣು ಬರುವುದು, ಗೂಬೆ, ಹಲ್ಲು, ಪವಿತ್ರತೆ, ಮುಖ, ರಸ್ತೆ, ಲೇಪನ, ಮೊಸರು, ಕುಡಿಯುವುದು, ನಿದ್ರಿಸುವುದು, ಕೊಡಲಿರುವುದು, ಈಗಾಗಲೇ ಹೇಳಲಾದ ವಾಕ್ಯ, ಕೊಳಲೂದುವುದು, ಯುವಕ, ಸಾಮವೇದ, ಯಜುರ್ವೇದ, ಅಥರ್ವವೇದ, ಪ್ರಯಾಣ, ಹೊಗಳುವುದು,  ನಮಸ್ಕಾರ, ಗುರು, ‘ಇದು ಈಗಿರುವಂತದ್ದು’ ಎನ್ನಲು, ತಣ್ಣನೆಯ ಮೃದುವಸ್ತುಗಳಿಂದ ಉಜ್ಜುವುದು, ಸ್ವೇದ, ತ್ವಚೆ, ತಾವರೆ, ಎಲೆ, ಮೊಗ್ಗು, ಮೃಗವದನ, ವೈಶಾಖ ಮಾಸ, ಸೌಂದರ್ಯ, ರಕ್ಷಣೆ, ಪ್ರಾರ್ಥನೆ, ನೀತಿ, ಕನ್ನಡಿ ನೋಡುವುದು, ಶರಚ್ಚಂದ್ರ, ಚಂದ್ರನ ಬೆಳಕು, ಸುಂದರವಾದುದು, ಹೇಳಿಕೊಳ್ಳುವುದು, ಬಿಳಿವಸ್ತು, ಒಗ್ಗೂಡುವಿಕೆ, ಶೃಂಗಾರ, ಚಂಚಲ, ಕುಲ, ಮಗು, ಆಜ್ಞಾನುವರ್ತಿ, ಪರಿತ್ಯಾಗ, ಧ್ಯಾನ, ಇಷ್ಟದ ವಸ್ತು, ಪದ್ಮಿನಿ ನಾಯಕಿ, ಮಹಿಳೆ, ಕುದುರೆಯ ಸ್ನಾಯುಗಳು, ಯಜ್ಞೋಪವೀತ, ಬಾಯಲ್ಲಿ ನೀರೂರಿಸುವುದು, ವಜ್ರಾಯುಧ, ಭೂಮಿಗೆ ಮೃತ್ತಿಕಾಲೇಪನ, ನವಗುಣ, ವರ್ತಮಾನ, ದೃಢತ್ವಗಳ ಸಂವಹನಕ್ಕೆ ಈ ಹಸ್ತ ಅನುಕೂಲಕರ.

**ಸಂಕರ ಹಸ್ತ ವಿಭಾಗದಲ್ಲಿ** ಮೃಗಶೀರ್ಷ ಹಸ್ತಗಳನ್ನು ಕಿವಿಗಳ ಸಮೀಪ ಹಿಡಿದರೆ ಎರಡು ಕಿವಿಗಳು ಎಂದೂ, ಬಾಯಿಯ ಬಳಿ ಹಿಡಿದರೆ ಅಳುವುದು ಎಂದೂ, ಮುಖವನ್ನು ತೋರಿಸುವ ಅರ್ಥದಲ್ಲೂ, ಎರಡು ಮೃಗಶೀರ್ಷ ಹಸ್ತಗಳನ್ನು ಎದೆಯಿಂದ 8 ಅಂಗುಲ ದೂರದಲ್ಲಿ ಒಂದು ಹಸ್ತದ ಮುಖವು ಇನ್ನೊಂದು ಹಸ್ತದ ಮುಖಕ್ಕೆ ಸೇರುವಂತೆ ಹಿಡಿದರೆ ಕೋಟೆ, ಸೆರೆ ಹಿಡಿದಿಡುವುದು ಎಂಬರ್ಥದಲ್ಲೂ, ತುದಿಗಳನ್ನು ತೋರಿಸುವ ಅರ್ಥದಲ್ಲೂ, ಆಡುವ ಕೊಳವೆಂದೂ ಅರ್ಥೈಸಬಹುದು.

ಬಾಲ್ಯವ0ಯಸ್ಸನ್ನು ಮೃಗಶೀರ್ಷ ಹಸ್ತ ಸಂಕೇತಿಸುತ್ತದೆ. **ನಾನಾರ್ಥ ಹಸ್ತ ವಿಭಾಗದಲ್ಲಿ** ಈ ಹಸ್ತವನ್ನು ಭುಜಾಂತರದ ಪ್ರದೇಶದಲ್ಲಿ ಅಡ್ಡವಾಗಿ0ಯೂ ಸ್ಥಿರವಾಗಿ0ಯೂ ನಿಲ್ಲಿಸಿದಲ್ಲಿ ಗಂಡ–ಹೆಂಡತಿಯ ಮನಸ್ಸು–ಶರೀರದ ಮಿಲನ ಎಂಬರ್ಥಗಳನ್ನು ಸೂಚಿಸುತ್ತದೆ ಮತ್ತು ಕೆಳಗೆ ಹಿಡಿದರೆ, **‘ಕ್ವ’** ಎಂಬ ಪ್ರತ್ಯ0ಯವೆಂದೂ ಅಥರ್ವವೇದವೆಂದೂ, ಅಡ್ಡಲಾಗಿ ಹಿಡಿದರೆ ಸಾಮೋಪಾ0ಯವೆಂದೂ, ಮುಂದೆ ಚಾಲಿಸಿದರೆ ದಾನೋಪಾ0ಯವೆಂದೂ, ಮೇಲ್ಮುಖವಾಗಿ ಹಿಡಿದರೆ ಹೂವಿನ ತೆರೆದಿರದ ಒಳ ಭಾಗವೆಂದು ಸಂವಹಿಸಬಹುದು.

ಸಪೂರ ದೇಹ, ವಸ್ತುಗಳಲ್ಲಿ ಸಮಾನ ಭಾವ, ಮೂರ್ಛೆ, ಸಮಜಾಯಿಷಿ, ಜಿಂಕೆ, ಕುದುರೆ, ಪೂರಕ ಸ್ಥಿತಿ, ವಿಶ್ರಾಂತ ಮನಸ್ಥಿತಿಯ ಸೂಚನೆಗೆ ಮೃಗಶೀರ್ಷ ಹಸ್ತಗಳನ್ನು ಜೋಡಿಸುವುದರಿಂದ ಸಾಧ್ಯ.

ಮೃಗಶೀರ್ಷ ಹಸ್ತಗಳನ್ನು ಎರಡು ಭುಜಗಳ ಬಳಿ ಅನ್ಯೋನ್ಯಭಿಮುಖವಾಗಿ ಹಿಡಿದರೆ ಅದು ಶ್ರೀಕೃಷ್ಣಾವತಾರ ಹಸ್ತ. ಉಳಿದಂತೆ ಚಂದ್ರಶೇಖರ ಹಸ್ತ, ಈಶಾನಹಸ್ತ, ಬೃಹಸ್ಪತಿ ಹಸ್ತ, ದಂಪತಿ ಹಸ್ತ, ಮಾತೃ ಹಸ್ತ, ಶ್ವಶ್ರು ಹಸ್ತ (ಅತ್ತೆ), ನನಾಂದೃ ಹಸ್ತ (ಗಂಡನ ಸಹೋದರಿ; ನಾದಿನಿ), ಸ್ನುಷಾ ಹಸ್ತ (ಸೊಸೆ), ಸಪತ್ನೀ (ಸವತಿ) ಹಸ್ತ, ಯಾತಾರಿಹಸ್ತ(ಸಹೋದರನ ಅಥವಾ ಸಹೋದರಿಯ ಸೊಸೆ), ಪುತ್ರೀಪುತ್ರ ಹಸ್ತಗಳಲ್ಲಿ, ವೇಣು, ಕನ್ಯಾರಾಶಿ, ಶ0ಯನಾಗಾರ, ದಂಪತಿಕೇಶೀಶಾಲಾ, ಹರಿಣ ಎನ್ನುವಲ್ಲಿ ಮೃಗಶೀರ್ಷದ ಉಪಯೋಗವಾಗುತ್ತದೆ.

**ನೃತ್ಯ ಸ್ಥಾನಕಗಳ** ಪೈಕಿ ಬ್ರಹ್ಮಸ್ಥಾನಕಕ್ಕೆ ಮೃಗಶೀರ್ಷ ಉಪಯೋಗವಿದೆ.





ಉಪಸರ್ಗ ಇಲ್ಲದ ಕ್ರಿಯಾಪದವನ್ನು ಮತ್ತು ಅಥರ್ವಣವೇದ ಸೂಚಿಸಲು ಮೃಗಶೀರ್ಷ ಹಸ್ತವನ್ನು ಕೆಳಮುಖವಾಗಿ ಹಿಡಿದರೆ, ಮೃಗಶೀರ್ಷ ಹಸ್ತವನ್ನು ಹಿಡಿದು ಕಂಪಿಸುವುದು ರಿಷಭ ಸ್ವರದ ಸಂಕೇತ. ಚತುರೋಪಾಯಗಳಲ್ಲಿ ಮೃಗಶೀರ್ಷ ಹಸ್ತವನ್ನು ಅಡ್ಡಲಾಗಿ ಹಿಡಿಯುವುದು ಸಾಮೋಪಾಯವೆಂದೂ, ಮೃಗಶೀರ್ಷ ಹಸ್ತವನ್ನು ಅಡ್ಡಲಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಅತ್ತಿತ್ತ ಚಲಿಸುವುದು ಬೇಧೋಪಾಯವೆಂದೂ ಅರ್ಥ.

ಶುಕತುಂಡ ಹಸ್ತ ಅಥವಾ ಮೃಗಶೀರ್ಷ ಮುದ್ರೆ0ಯನ್ನು ಮುಖದೆದುರಿನಲ್ಲಿ ಚಲಿಸದೆ ನಿಲ್ಲಿಸುವುದು ಪದ್ಮಿನಿ ನಾಯಕಿಯ ಸಂಕೇತವಾದರೆ, ಮೃಗಶೀರ್ಷ  ಅಥವಾ ಅರ್ಧ ಮೃಗಶೀರ್ಷ ಹಸ್ತವನ್ನು ಭುಜದ ಹತ್ತಿರ ಚಲಿಸದೆ ಹಿಡಿದರೆ ಚಿತ್ತಿನಿ ನಾಯಕಿಯೆಂದೂ, ಹಂಸಪಕ್ಷಹಸ್ತ ಅಥವಾ ಮೃಗಶೀರ್ಷವನ್ನು ಎದೆ0ಯ ಮುಂದೆ ನಿಲ್ಲಿಸಿದರೆ ಶಂಕಿನಿ ನಾಯಕಿಯೆಂದೂ ಅರ್ಧಚಂದ್ರಹಸ್ತ ಅಥವಾ ಮೃಗಶೀರ್ಷವನ್ನು ಹೊಟ್ಟೆ0ಯ ಬಳಿ ಹಿಡಿಯುವುದು ಹಸ್ತಿನಿ ನಾಯಕಿಯೆಂದೂ ಅರ್ಥ.

0ಯಕ್ಷಗಾನದಲ್ಲೂ ಹೆಣ್ಣು, ಗಂಡು, ಭಸ್ಮದಾರಣೆ, ಮನೆ ಇತ್ಯಾದಿ0ಯಾಗಿ ಬಳಸಲ್ಪಡುತ್ತದೆ.

ನಿತ್ಯ ಜೀವನದಲ್ಲೂ ಬಾ, ಪ್ರಾಣಿಗಳನ್ನು ಸವರುವಾಗ, ವಿಭೂತಿ ಹಚ್ಚಿಕೊಳ್ಳುವುದು... ಇತ್ಯಾದಿ0ಯಾಗಿ ಬಳಕೆ0ಯಾಗುತ್ತದೆ.

ಮೃಗಶೀರ್ಷ ಹಸ್ತದಲ್ಲಿ ಉಂಗುರ ಬೆರಳನ್ನು ಪ್ರತ್ಯೇಕಿಸಿ ಅಗಲವಾಗಿ ಹಿಡಿಯುವುದು **ಅರ್ಧಮೃಗಶೀರ್ಷ** ಎನಿಸಿಕೊಳ್ಳುತ್ತದೆ. ಭರತಾರ್ಣವದಲ್ಲಿ ಉಲ್ಲೇಖಿತ.

ಇದರ ವಿನಿಯೋಗ : ಬಾಲಸ್ತ್ರೀ0ಯನ್ನು ತೋರಿಸಲು, ಸಮಾಧಾನ ಅಥವಾ ಉಪಶಮನದ ಮಾತು ಎಂಬ ಅರ್ಥದಲ್ಲಿ ಉಪ0ಯೋಗಿಸಲ್ಪಡುತ್ತದೆ. ಅರ್ಧ ಮೃಗಶೀರ್ಷವನ್ನು ಕೆಳಹೊಟ್ಟೆಯ ಬಳಿ ಹಿಡಿದಾಗ ತಂಗಿಯೆಂದೂ ಅರ್ಥ.ಇದರ ಬಳಕೆ ಕಡಿಮೆ.

ಮೃಗಶೀರ್ಷ ಹಸ್ತಗಳನ್ನು ಎದೆ0ಯ ಮುಂಭಾಗದಲ್ಲಿ ಮೇಲ್ಮುಖವಾಗಿ ಮಾಡಿ ಒಂದರ ಪಕ್ಕದಲ್ಲೊಂದು ಹಿಡಿ0ಯುವುದು **ಭಾರತೀ ಹಸ್ತ**. ಭಾರತೀ ಎಂದರೆ ಸರಸ್ವತಿ ಎಂದರ್ಥ. ಬಾಲರಾಮಭರತದಲ್ಲಿ ಉಲ್ಲೇಖಿತ.

ವಿನಿ0ಯೋಗ: ಸರಸ್ವತೀಧ್ಯಾನ, ಗ್ರಂಥಪಠನ, ಕೃಷ್ಣನು ಬೆಣ್ಣೆ0ಯನ್ನು ಹಿಡಿದುಕೊಂಡಿರುವುದು, ಸರ್ವಾಂಗ ಭಸ್ಮಲೇಪ, ‘ತಪಸ್ಸನ್ನು ಮಾಡಿದ್ದೇನೆ, ವರವನ್ನು ಅನುಗ್ರಹಿಸು’ ಎಂದು 0ಯಾಚಿಸುವ ಭಾವ, ಏನಾಗಬೇಕು? ಕಾರಣವೇನು? ಎಂದು ಕೇಳುವುದು, ಮಗುವನ್ನು ಮಲಗಿಸುವುದು, ಮನಸ್ಸಿನಲ್ಲಿ0ಯೇ ಶಿಶುವನ್ನು ಲಾಲನೆ ಮಾಡುತ್ತಿರುವಂತೆ ಕಲ್ಪಿಸಿಕೊಳ್ಳುವುದು. ನಿತ್ಯಜೀವನದಲ್ಲಿ ಮಗುವನ್ನು ಎತ್ತಿಕೊಳ್ಳುವುದು ಎಂದು ಸಂಕೇತಿಸಲು ಬಳಸುತ್ತಾರೆ.

ಮೃಗಶೀರ್ಷ ಹಸ್ತಗಳ ತೋರುಬೆರಳುಗಳನ್ನು ಮೇಲಕ್ಕೆತ್ತುವುದನ್ನು **ಚಂದ್ರಮೃಗಹಸ್ತ** ಎನ್ನಲಾಗಿದೆ. ಇದರ ವಿನಿಯೋಗ: ಮುಳ್ಳುಹಂದಿ.

**ಕಥಕಳಿ**ಯಲ್ಲಿ ಮೃಗಶೀರ್ಷವನ್ನು ಜಿಂಕೆ, ಪರಮಾತ್ಮ, ಯೋಗಿ, ಮಾವುತ, ಬಾವಿ, ಹೊಕ್ಕುಳು, ಜಲಶಕ್ತಿ ಎಂಬ ವಿಷಯಗಳ ಸಂವಹನಕ್ಕೆ ಉಪಯೋಗಿಸುತ್ತಾರೆ. ಮಿಶ್ರ ಮುದ್ರೆಗಳ ಪೈಕಿ **ಮೃಗಶೀರ್ಷ ಮತ್ತು ಕಟಕವು** ಉಲ್ಲೇಖಿತವಾಗಿದ್ದು ಶಿವ ಎಂಬುದನ್ನು ಸಂಕೇತಿಸುತ್ತದೆ.



# ಒಳನೋಟ

- ಆಗಸ್ಟ್ ೩೦ : ೧. ಸಾಧನಾ ಸಂಗಮ ಟ್ರಸ್ಟ್‌ನ ಗುರು ವಿದುಷಿ ಜ್ಯೋತಿ ಪಟ್ಟಾಭಿರಾಮ್ ಅವರ ಶಿಷ್ಯೆ ತನುಜಾ ಅವರ 'ನೃತ್ಯ ನೀರಾಜನ' ಭರತನಾಟ್ಯ ರಂಗಪ್ರವೇಶ. ಸ್ಥಳ : ಭಾರತೀಯ ವಿದ್ಯಾಭವನ.

  ೨. ಶ್ರೀಧರ್ ಮತ್ತು ಅನುರಾಧಾ ಶ್ರೀಧರ್ ಅವರಿಂದ 'ಮಹಾವೀರ ಕರ್ಣ' ರೂಪಕ. ಸ್ಥಳ : ನಾರದಾ ಗಾನಸಭಾ, ಚೆನ್ನೈ.
- ಸೆಪ್ಟೆಂಬರ್ ೦೯ : ಮೈಸೂರಿನ ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿ ರಾವ್ ಅವರ ಕಲಾಚಿಂತನ ಹಾಗು ಮಾಸದ ಮಾತು ಪುಸ್ತಕಗಳ ಅನಾವರಣ. ಸ್ಥಳ : ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನ.
- ಸೆಪ್ಟೆಂಬರ್ ೦೯ರಿಂದ ೧೩ : ಕರ್ನಾಟಕ ಗಾನ ಕಲಾ ಪರಿಷತ್‌ನ ಸಂಗೀತ ವಿದ್ವಾಂಸರ ೪೦ನೇ ಸಂಗೀತ ಸಮ್ಮೇಳನ ಮತ್ತು ಯುವ ಸಂಗೀತ ವಿದ್ವಾಂಸರ ಸಮ್ಮೇಳನ, ಗಾನ ಕಲಾ ಭೂಷಣ ದಿ. ವೀಣಾರಾಜಾರಾಯರ ಜನ್ಮಶತಾಬ್ದಿ ಸಮಾರಂಭ. ಈ ಪ್ರಯುಕ್ತ ಕಛೇರಿಗಳು ಮತ್ತು ಉಪನ್ಯಾಸಗಳು, ಏಳು ವಿದ್ವಾಂಸರಿಗೆ ಸನ್ಮಾನ ಮತ್ತು ಸಂಗೀತ ವಿದ್ವಾಂಸರ ಸಮ್ಮೇಳನಾಧ್ಯಕ್ಷ ವಿದ್ವಾನ್. ಎಂ. ಕೋದಂಡರಾಮ್ ಅವರಿಗೆ ಗಾನಕಲಾ ಭೂಷಣ ಮತ್ತು ಯುವ ಸಂಗೀತ ಸಮ್ಮೇಳನಾಧ್ಯಕ್ಷೆ ವಿದುಷಿ ಕಲಾವತಿ ಅವಧೂತ್ ಅವರಿಗೆ ಗಾನಕಲಾಶ್ರೀ ಬಿರುದು ಪ್ರದಾನ . ಸ್ಥಳ : ಮಲ್ಲೇಶ್ವರಂನ ಸೇವಾಸದನ ಸಭಾಂಗಣ.
- ಸೆಪ್ಟೆಂಬರ್ ೧೦ : ಕರ್ನಾಟಕ ಯಕ್ಷಗಾನ ಅಕಾಡೆಮಿಯ ಪ್ರಾಯೋಜಕತ್ವದಲ್ಲಿ ಕರಾವಳಿ ಮಲೆನಾಡು ಪ್ರದೇಶದ ಆಯ್ದ ೨೦ ಸ್ಥಳಗಳಲ್ಲಿ ಯಕ್ಷಗಾನ ತಾಳಮದ್ದಳೆಯನ್ನಾಧರಿಸಿದ ಕಾರ್ಯಕ್ರಮ 'ಪ್ರಸಂಗ ಪ್ರವಚನ ಪರ್ವ'ದ ಉದ್ಘಾಟನಾ ಸಮಾರಂಭ ಮತ್ತು ತಾಳಮದ್ದಳೆ ಕಾರ್ಯಕ್ರಮ. ಸ್ಥಳ : ಶ್ರೀಕೃಷ್ಣ ಕಲ್ಯಾಣ ಮಂದಿರ, ಮಂಗಳೂರು.
- ಸೆಪ್ಟೆಂಬರ್ ೦೯–೧೨, ೧೭–೧೯ : ದ ಟೈಮ್ಸ್ ಆಫ್ ಇಂಡಿಯಾ ಬೆಂಗಳೂರು ಇಂಟರ್ ನ್ಯಾಶನಲ್ ಆರ್ಟ್ಸ್ ಫೆಸ್ಟಿವಲ್. ಸ್ಥಳ : ಶೀಷ್ ಮಹಲ್, ಬೆಂಗಳೂರು ಅರಮನೆ, ಓಪಸ್ ಮತ್ತು ಸುಚಿತ್ರಾ ಸಿನೆಮಾ ಮತ್ತು ಸಂಸ್ಕೃತಿ ಅಕಾಡೆಮಿ, ಆರ್.ವಿ.ಡೆಂಟಲ್ ಕಾಲೇಜು, ಚೌಡಯ್ಯ ಮೆಮೋರಿಯಲ್ ಹಾಲ್.
- ಸೆಪ್ಟೆಂಬರ್ ೧೬ : ರೇಚಿತ ನೃತ್ಯಾಲಯ ಮತ್ತು ಎಸ್ ಆರ್ ಎಸ್ ಮ್ಯೂಸಿಕ್ ಸಿಂಡಿಕೇಟ್ ಪ್ರೈ.ಲಿ ಸಹಭಾಗಿತ್ವದಲ್ಲಿ ಕುತ್ತೂರ್ ಆರ್. ವೆಂಕಟಸುಬ್ರಹ್ಮಣ್ಯಂ ಅವರ ಭರತನಾಟ್ಯ. ಸ್ಥಳ :ಪದ್ಮ ಶೇಷಾದ್ರಿ ಬಾಲಭವನ ಸ್ಕೂಲ್, ಚೆನ್ನೈ.





- ಮೈಸೂರಿನ ಬದರೀ ದಿವ್ಯಭೂಷಣ್ ಮತ್ತು ಅಂಜನಾ ಭೂಷಣ್ ಅವರ ನೃತ್ಯಪ್ರದರ್ಶನ. ಸೆಪ್ಟೆಂಬರ್ ೧೪ : ಸೆಪ್ಟೆಂಬರ್ ೧೮ : ಕಟಕ್‌ನ ಕಲಾವಿಕಾಸ ಕೇಂದ್ರ ಆಡಿಟೋರಿಯಂ. ಮತ್ತು ಮೈಸೂರು ಮತ್ತು ಮಡಿಕೇರಿ ದಸರಾದಲ್ಲಿ ನೃತ್ಯಪ್ರದರ್ಶನ.
- ಸೆಪ್ಟೆಂಬರ್ ೨೭: ಗರುಡ ನಾಟ್ಯ ಸಂಘ ಉದ್ಘಾಟನೆ, ಸ್ಥಳ : ಕುಮಾರಸ್ವಾಮಿ ಲೇಔಟ್‌ನ ಶ್ರೀ ಅಂಬಾ ಭವಾನಿ ದೇವಸ್ಥಾನ, ಬೆಂಗಳೂರು.
- ಅಕ್ಟೋಬರ್ ೧ : ಸಾಯಿ ನೃತ್ಯೋತ್ಸವ. ಸ್ಥಳ : ಮಲ್ಲೇಶ್ವರಂನ ಸೇವಾ ಸದನ
- ಅಕ್ಟೋಬರ್ ೧೧ : ಭರತನೃತ್ಯ ಸಭಾ ಆಶ್ರಯದಲ್ಲಿ ಸನಾತನ ನಾಟ್ಯಸಂಸ್ಥೆಯ ಗುರು ವಿದುಷಿ ಶಾರದಾಮಣಿ ಶೇಖರ್ ಅವರ ಶಿಷ್ಯೆ ಬೆಂಗಳೂರಿನ ಮೃದುಲಾ ವೇಣುಗೋಪಾಲ್ ಅವರಿಂದ ಭರತನಾಟ್ಯ. ಸ್ಥಳ : ಪುರಭವನ, ಮಂಗಳೂರು.
- ಅಕ್ಟೋಬರ್ ೧೫–೨೫ : ಸ್ವಿಟ್ಜರ್ಲ್ಯಾಂಡ್‌ನ ನೃತ್ಯಗುರು ವಿದ್ವಾನ್ ಡಿ. ಕೇಶವ ಅವರ ಕಲಾಶ್ರೀ ಸಂಸ್ಥೆಯಿಂದ ದೀಪಾವಳೀ ಪ್ರಯುಕ್ತ 'ಪಂಚ ಭೂತ–ದಿ ಫೈವ್ ಎಲಿಮೆಂಟ್ಸ್' ಪ್ರಯೋಗ. ಸ್ಥಳ : ಬಾಸೆಲ್.
- ಅಕ್ಟೋಬರ್ ೧೭ : ಸಂಪಾಜೆಯ ಡಾ. ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನದ ಆಶ್ರಯದಲ್ಲಿ ಈ ವರ್ಷದ ಡಾ. ಕೀಲಾರು ಗೋಪಾಲಕೃಷ್ಣಯ್ಯನವರ ಸಂಸ್ಮರಣೆ, ಪ್ರತಿಭಾ ಪುರಸ್ಕಾರ ಮತ್ತು ಪ್ರಸಿದ್ಧ ಸಂಪಾಜೆ ಯಕ್ಷೋತ್ಸವ. ತೆಂಕು–ಬಡಗಿನ ಸುಮಾರು ನೂರಿಪ್ಪತ್ತು ಖ್ಯಾತ ಕಲಾವಿದರ ಕೂಡುವಿಕೆಯಲ್ಲಿ ಐದು ಪ್ರಸಂಗಗಳ ಯಕ್ಷಗಾನ ಬಯಲಾಟ ಮತ್ತು ಏಕವ್ಯಕ್ತಿ ಯಕ್ಷಗಾನ. ಪ್ರಸಿದ್ಧ ಅರ್ಥಧಾರಿ, ಚಿಂತಕ, ವಿಮರ್ಶಕ ಡಾ. ಎಂ. ಪ್ರಭಾಕರ ಜೋಷಿ ಅವರಿಗೆ ಶೇಣಿ ಪ್ರಶಸ್ತಿ. ಯಕ್ಷಗಾನ ಭಾಗವತ ಪದ್ಯಾಣ ಗಣಪತಿ ಭಟ್ಟರಿಗೆ ಸನ್ಮಾನ. ದಿವಂಗತ ಕುಕ್ಕಿಲ ಕೃಷ್ಣ ಭಟ್ ಅವರ ಸಂಪಾದಕತ್ವದ 'ಪಾರ್ತಿಸುಬ್ಬನ ಯಕ್ಷಗಾನಗಳು' ಪುಸ್ತಕ ಅನಾವರಣ. ಸ್ಥಳ : ಸಂಪಾಜೆ ಕಲ್ಲುಗುಂಡಿ ಶಾಲಾ ವಠಾರ.
- ಅಕ್ಟೋಬರ್ ೨೫ : ಕಲ್ಪತರು ಕಲಾವಿಹಾರದ ನಿರ್ದೇಶಕಿ ಪದ್ಮಜಾ ಸುರೇಶ್ ಅವರ ಶಿಷ್ಯೆ ವಿಜಯಲಕ್ಷ್ಮಿ ಅವರ ಭರತನಾಟ್ಯ ರಂಗಪ್ರವೇಶ. ಸ್ಥಳ : ಜೆಎಸ್‌ಎಸ್ ಆಡಿಟೋರಿಯಂ, ಬೆಂಗಳೂರು.
- ನವೆಂಬರ್ ೩, ೪, ೬, ೭, ೮ : ಮಂಗಳೂರಿನ ಭರತನೃತ್ಯ ಸಭಾ ಮತ್ತು ಮಣಿಕೃಷ್ಣಸ್ವಾಮಿ ಅಕಾಡೆಮಿಯ ಸಹಭಾಗಿತ್ವದಲ್ಲಿ ಭರತಮಣಿ ರಾಷ್ಟ್ರೀಯ ಸಂಗೀತ ನೃತ್ಯೋತ್ಸವ. ದೇಶದ ಪ್ರಸಿದ್ಧ ಕಲಾವಿದರಿಂದ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು. ಸಮಾರೋಪದಲ್ಲಿ ರಂಜನಿ ಗುರುಪ್ರಸಾದ್, ಮತ್ತು ಚೆನ್ನೈಯ ಹೆಸರಾಂತ ನೃತ್ಯಪಟು ಶೀಜಿತ್ ಕೃಷ್ಣ– ಇವರುಗಳಿಗೆ ಭರತಮಣಿ ರಾಷ್ಟ್ರೀಯ ಯುವಪ್ರಶಸ್ತಿ ಪ್ರದಾನ. ಸ್ಥಳ : ಪುರಭವನ, ಮಂಗಳೂರು.

ದರ್ಪಣ

# ನೃತ್ಯ ರಂಗದ ಅನಭಿಷಿಕ್ತ ರಾಣಿ: ರುಕ್ಮಿಣಿ

...... ಈವರೆಗೆ

(ರುಕ್ಮಿಣೀ ನೃತ್ಯ ರಂಗದ ಪಾಲಿಗೆ ಪ್ರವರ್ತಕಿ. ಭರತನಾಟ್ಯದ ಪ್ರವರ್ಧಮಾನಕ್ಕೆ ಮೂಲ ಸ್ರೋತ. ಶೃಂಗಾರ ರಸದ ಅತೀ ಎನಿಸುವ ಅಂಶಗಳನ್ನು ತೆಗೆದು ಹಾಕಿ ಭಕ್ತಿಶೃಂಗಾರಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನಿತ್ತರು. ನೃತ್ಯ ಗ್ರಂಥಗಳಲ್ಲಿ ಉಪಲಬ್ಧವಿರುವ ಹಸ್ತ–ಮುದ್ರೆಗಳ ವಿನ್ಯಾಸಗಳನ್ನು ಕ್ರಮವತ್ತಾಗಿ ಜಾರಿಗೆ ತಂದರು. ಅಡವುಗಳನ್ನು ಪರಿಷ್ಕರಿಸಿ ಚೌಕಟ್ಟು ಹಾಕಿಕೊಟ್ಟರು. ವಯೋಲಿನ್‌ನ್ನು ಬಳಕೆಗೆ ಒಗ್ಗಿಸಿಕೊಂಡರು. ಮುಖ್ಯವಾಗಿ ನರ್ತಕಿಯ ಬಲಬದಿಗೆ ಹಿಮ್ಮೇಳದವರನ್ನು ಕುಳ್ಳಿರಿಸಿ ಸ್ಥಾನ ಕಲ್ಪಿಸಿದರು...)



**ಸಾಂ**ಪ್ರದಾಯಿಕ ಕಂದಾಚಾರಗಳು ಮುರಿದುಬೀಳಲಾರಂಭಿಸಿದ್ದವು. ಕ್ರಮೇಣ ತಮ್ಮ ಮಕ್ಕಳನ್ನು ಪೋಷಕರು ಕಲಾಕ್ಷೇತ್ರಕ್ಕೆ ನೃತ್ಯ ಕಲಿಯಲು ಕಳಿಸಲಾರಂಭಿಸಿದರು. ಮೊದಲೆಲ್ಲಾ ಪ್ರತಿಯೊಬ್ಬರ ಮನೆಗೆ ಹೋಗಿ ಟಿಕೆಟ್ ನೀಡಿದರೂ ಬರಲು ಒಪ್ಪದಿದ್ದ ಜನರ ಮನಸ್ಥಿತಿ ಬದಲಾಗುತ್ತಾ ಬಂತು. ರುಕ್ಮಿಣಿ ಎಂದರೆ ಸಾಕು, ಮೂಗು ಮುರಿಯುತ್ತಿದ್ದ ಮಂದಿಯೂ ಕಣ್ಣರಳಿಸಿ ನೋಡಹೊರಟರು.

ಸಾದಿರ್ ಕಾಲಕ್ಕೆ ದೇವದಾಸಿಗಳ ಮೈಮೇಲೆ ಹೇರಲಾಗುತ್ತಿದ್ದ ಮಣಭಾರದ ಕಾಮಪ್ರಚೋದಕ ವೇಷಭೂಷಣಗಳೂ, ಅತೀ ಎನಿಸುವ ಅಲಂಕಾರಗಳೂ ಮರೆಯಾಗುತ್ತಾ ಬಂದಿತ್ತು. ಸರಳ ಉಡುಗೆ, ನಿರ್ದಿಷ್ಟ ಬಗೆಯ ಆಭರಣಗಳನ್ನು ಬಳಸುವ ಚಾಲ್ತಿ ಹೆಚ್ಚು ಹತ್ತಿರವಾಯಿತು. ಅದರಲ್ಲೂ ಭರತನಾಟ್ಯಕ್ಕೆ ಇಟಾಲಿಯನ್ ವಿನ್ಯಾಸಕಿ ಮೇಡಮ್ ಕಸಾನ್ ಸಹಾಯದಿಂದ ರುಕ್ಮಿಣಿ ನವೀನ ಬಗೆಯ ಸುಂದರವಾದ ವಸ್ತ್ರಗಳನ್ನು ರೂಪಿಸಿದರು. ಇಂದಿಗೂ ಕೆಲವು ಸಣ್ಣ ಪುಟ್ಟ ಮಾರ್ಪಾಡಿನೊಂದಿಗೆ ಅವರೀರ್ವರೂ ನಿರೂಪಿಸಿಕೊಟ್ಟ ವಸ್ತ್ರಾಭರಣಗಳೇ ಚಾಲ್ತಿಯಲ್ಲಿವೆ.



ಗುರು ಶ್ರೀ ಮೀನಾಕ್ಷಿ ಸುಂದರಂ ಪಿಳ್ಳೈ.

ಕಲಾವಿದರನ್ನು ಗುಣಮಟ್ಟದ ಆಕರ್ಷಣೆಯೊಂದಿಗೆ ಬಿಂಬಿಸಬೇಕಾದರೆ, ಒಳ್ಳೆಯ ನಿಲುವುಗಳನ್ನು ಕೊಡಬೇಕಾದರೆ ರಂಗ ಮತ್ತು ಬೆಳಕಿನ ವ್ಯವಸ್ಥೆ ಅತೀ ಮುಖ್ಯ ಎಂಬ ಅರಿವೂ ರುಕ್ಮಿಣಿಗೆ





ಇತ್ತು. ಹಾಗಾಗಿಯೇ ಥಿಯೋಸೋಫಿಕಲ್ ಸೊಸೈಟಿಯಲ್ಲಿದ್ದ ರಂಗನಟರಾದ ಕಾನ್ರಾಡ್ ವೋಲ್ದ್ರಿಂಗ್, ಅಲೆಕ್ಸ್, ಮೇರಿ ಎಲ್ಮೋರ್ ಇವರುಗಳ ಸಹಾಯದಿಂದ ಬೆಳಕು ವ್ಯವಸ್ಥೆಯ ರೀತಿ–ನೀತಿಗಳನ್ನು ಪರಿಣಾಮಕಾರಿಯಾಗಿ ಬಳಕೆಗೆ ತಂದರು.



ಸಾದಿರ್ ಪ್ರವರ್ತಕರಲ್ಲೋಬ್ಬರಾದ ಪೊನ್ನಯ್ಯ ಪಿಳ್ಳೈ.

ಸುಧಾರಣೆಗಳನ್ನು ಮಾಡಿದರೆ ಸಾಕೇ? ಅದನ್ನು ಭವಿಷ್ಯದಲ್ಲೂ ಪರಿಪಾಲಿಸಿಕೊಂಡು ಹೋಗಲು ಒಳ್ಳೆಯ ಪರಂಪರೆ ಬೇಕಲ್ಲವೇ? ಹಾಗಾಗಿಯೇ ಕಂದಾಚಾರಗಳನ್ನಿಟ್ಟುಕೊಂಡು ಪ್ರಭುತ್ವ ಸಾಧಿಸಲೆತ್ನಿಸುತ್ತಿದ್ದ ಗುರುಗಳನ್ನು ಕಲಾಕ್ಷೇತ್ರದಲ್ಲಿ ಪಾಠ ನಡೆಸಲು ರುಕ್ಮಿಣೀ ಉಳಿಸಿಕೊಳ್ಳುತ್ತಿರಲಿಲ್ಲ. ಮಾತ್ರವಲ್ಲದೆ, ಕ್ರಮೇಣ ಪೂರಕ ಕಲೆಗಳ ಶಿಕ್ಷಣಕ್ಕೂ ಅವಕಾಶ ವ್ಯಾಪಕವಾಗಿ ದೊರೆಯಿತು. ಅಂಬು ಪಣಿಕ್ಕರ್, ಚಂದು ಪಣಿಕ್ಕರ್ ಅವರಂತಹ ಕಥಕ್ಕಳಿಯ ಮೇರು ಗುರುಗಳು ರುಕ್ಮಿಣೀಗೆ ಹೆಗಲು ಕೊಟ್ಟರು. ಕಾಳಿದಾಸ ನೀಲಕಂಠ ಅಯ್ಯರ್, ಪಾಪನಾಶಂ ಶಿವನ್ ಮುಂತಾದ ಮಹಾನ್ ಗುರುಗಳು ಅರುಂಡೇಲ್ ಅವರ ಪ್ರದರ್ಶನಗಳಿಗೆ ಸಂಗೀತ, ತಾಳಕ್ಕೆ ಜೊತೆಯಾದರು.

ಸಂಗೀತ ರುಕ್ಮಿಣೀ ಅರುಂಡೇಲ್ ಅವರ ಮೊದಲ ಆಸಕ್ತಿ. ನೃತ್ಯವು ಸಂಗೀತಕ್ಕೆ ದೃಶ್ಯ ರೂಪ ಕೊಡುವ ಸಾಧನ ಎಂಬುದು ಅವರ ನಂಬಿಕೆ. ಟೈಗರ್ ವರದಾಚಾರ್ಯ, ಮೈಸೂರು ವಾಸುದೇವಾಚಾರ್ಯ, ಮಧುರೈ ಸುಬ್ರಹ್ಮಣ್ಯ ಅಯ್ಯರ್, ವೀಣಾ ಕೃಷ್ಣಮಾಚಾರ್ಯ, ಟಿ. ಕೆ. ರಾಮಸ್ವಾಮಿ ಅಯ್ಯಂಗಾರ್, ವೀಣಾ ಸಾಂಬಶಿವ ಅಯ್ಯರ್, ಬುಡಲೂರು ಕೃಷ್ಣಮೂರ್ತಿ ಶಾಸ್ತ್ರಿ, ರಾಜಾರಾಮ್, ಎಂ.ಡಿ. ರಾಮನಾಥನ್, ತುರೆಯೂರು ರಾಜಗೋಪಾಲ ಶರ್ಮ ಮುಂತಾದ ಗುರುಗಳು ಸಂಗೀತ ಅಭ್ಯಾಸಿಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟವರು.

ರುಕ್ಮಿಣೀಯಲ್ಲಿರುವ ಶಕ್ತಿಯನ್ನು ಗುರುತಿಸಿದ್ದರು ಥಿಯೋಸೋಫಿಕಲ್ ಸೊಸೈಟಿಯ ಪ್ರವರ್ತಕಿ ಆ್ಯನಿ ಬೆಸೆಂಟ್. ಆದಾಗಲೇ ಥಿಯೋಸೋಫಿಕಲ್ ಸೊಸೈಟಿಯ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ರುಕ್ಮಿಣೀಗೆ ಅಂದಿನ ಕಾಲಕ್ಕೆ ಮೊದಲು ಒಲಿದು ಮುಡಿಗೇರಿದ ಪಟ್ಟ ಯಾವುದೆಂದುಕೊಂಡಿರಿ ?



'ದೇವಿ' !

ರುಕ್ಮಿಣೀ ವಿಶ್ವ ಮಾತೃ ಸಪ್ತಾಹದ ನಾಯಕಿಯಾಗಿದ್ದರು. ರಾಷ್ಟ್ರದ ಪ್ರತಿನಿಧಿಯಾಗಿ ಮಹತ್ತರ ಜವಾಬ್ದಾರಿ.

ಅಂದಿನಿಂದ ರುಕ್ಮಿಣೀ ಅರುಂಡೇಲ್ 'ರುಕ್ಮಿಣೀದೇವಿ ಅರುಂಡೇಲ್' !

( ಸಶೇಷ)

ರಂಗಸ್ಥಳ

# ಚಿಟ್ಟಾಣಿ ಅಭಿನಯ ನೋಡಿ ಅದ್ಭುತ ಎಂದಿದ್ದರು ಡಾ.ರಾಜ್ !

● ರಾಕೇಶ್ ಕುಮಾರ್ ಕಮ್ಮಜೆ

**ಯಾ**ವುದಾದರೂ ಒಂದು ಕ್ಷೇತ್ರದಲ್ಲಿ ಅಗಾಧವಾದದ್ದನ್ನು ಸಾಧಿಸಿದವನು ತನ್ನ ಬಾಲ್ಯದಲ್ಲೇ ಆ ಕುರಿತಾದ ಕುರುಹುಗಳನ್ನು ನೀಡಿರುತ್ತಾನೆ. ಬೇರೆ ಮಕ್ಕಳಿಗೆ ಕ್ರಿಕೆಟ್ ಎಂದರೇನೆಂದೇ ಅರ್ಥವಾಗದ ತೀರಾ ಎಳೆ ವಯಸ್ಸಿನಲ್ಲಿ ಸಚಿನ್ ತೆಂಡೂಲ್ಕರ್ ಬ್ಯಾಟ್ ಹಿಡಿದು ನಿಂತಿರುವ ಫೋಟೋವನ್ನು ನೀವು ಪತ್ರಿಕೆಗಳಲ್ಲಿ ನೋಡಿರಬಹುದು. ಪ್ರಾಯಶಃ ಭವಿಷ್ಯದ ಇತಿಹಾಸಕ್ಕೆ ಅದು ಮುನ್ನುಡಿಯಿರಬೇಕು! ಕಳೆದ ಬಾರಿ ಇದೇ 'ರಂಗಸ್ಥಳ'ದಲ್ಲಿ ಕಾಣಿಸಿಕೊಂಡ ಚಿಟ್ಟಾಣಿ ರಾಮಚಂದ್ರ ಹೆಗಡೆಯೂ ಹಾಗೆಯೇ, ತಾನು ಒಂದನೇ ತರಗತಿಗೆ ಹೋಗುತ್ತಿದ್ದಾಗಲೇ ಯಕ್ಷಗಾನದ ಕುರಿತಾಗಿ ಕುತೂಹಲ ಇಟ್ಟುಕೊಂಡವರು! ಮಾತ್ರವಲ್ಲ, ಮನೆಯಲ್ಲಿ ಶಾಲೆಗೆಂದು ಕಳುಹಿಸಿದರೆ ಗುಡ್ಡದಲ್ಲಿ ಯಕ್ಷಗಾನ ಕುಣಿಯುತ್ತಾ ಕಾಲ ಕಳೆಯುತ್ತಿದ್ದವರು!!



ಹಾಗೆ ಮೊದಮೊದಲು ಗುಡ್ಡದಲ್ಲೇ ಯಕ್ಷಾಭ್ಯಾಸ ಮಾಡಿದ ಚಿಟ್ಟಾಣಿ ಮತ್ತೆ ಬೆಳೆದದ್ದೇ ಹೊರತು ಇಳಿದದ್ದಿಲ್ಲ. ಕನ್ನಡ ಚಿತ್ರರಂಗದ ಮೇರುನಟ ಡಾ.ರಾಜ್ ಕುಮಾರ್ ಚಿಟ್ಟಾಣಿಯವರ ಕೆಲವು ಪಾತ್ರಗಳನ್ನು ನೋಡಿ " ಚಿಟ್ಟಾಣಿ ಒಬ್ಬ ಅದ್ಭುತ ಕಲಾವಿದ. ನಾನು ಇವರ ವೇಷಗಳನ್ನು ಮೊದಲೇ ನೋಡಿದ್ದಿದ್ದರೆ ನನ್ನ 'ಬಭ್ರುವಾಹನ' ಸಿನಿಮಾದ ಅರ್ಜುನ ಹಾಗೂ ಬಭ್ರುವಾಹನ ಪಾತ್ರಗಳನ್ನು ಇನ್ನೂ ಚೆನ್ನಾಗಿ ಅಭಿನಯಿಸುತ್ತಿದ್ದೆ" ಎಂದು ಉಸುರಿದ್ದು ಚಿಟ್ಟಾಣಿಯವರ ಕಲಾ ಸಾಮರ್ಥ್ಯಕ್ಕೆ ಸಿಕ್ಕ ಮಹತ್ತರವಾದ ಪ್ರಮಾಣಪತ್ರ!

ಯಕ್ಷಗಾನದ ಗಂಧಗಾಳಿಯಿಲ್ಲದ ಮುಂಬಯಿಯಂಥ ಪ್ರದೇಶದಲ್ಲೂ ಗೆಜ್ಜೆಕಟ್ಟಿ ಜನಮನ ಸೆಳೆದವರು ಚಿಟ್ಟಾಣಿ. ಯಕ್ಷರಂಗದ ಅಪೂರ್ವ ಜೋಡಿಯಾಗಿದ್ದ ಚಿಟ್ಟಾಣಿ ರಾಮಚಂದ್ರ ಹೆಗಡೆ ಮತ್ತು ಭಾಗವತ ದಿ.ಗುಂಡ್ಮಿ ಕಾಳಿಂಗ ನಾವಡರ ತಂಡ ಮುಂಬಯಿಯಲ್ಲಿ 'ಭಸ್ಮಾಸುರ ಮೋಹಿನಿ' ಪ್ರಸಂಗವನ್ನು ಸುಮಾರು ನಲವತ್ತಕ್ಕೂ ಅಧಿಕ ಭಾರಿ ಆಡಿತೋರಿಸಿತ್ತೆಂದರೆ ಈರ್ವರ ಚಮತ್ಕಾರ ಎಂಥದ್ದಿರಬೇಡ?







ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಬಗೆಗೆ ಹೇಳುವಾಗ ಅವರ ವಿನಯದ ಬಗೆಗೆ ಹೇಳದಿದ್ದರೆ ಅದು ಅಪರಾಧವೇ. ತಾನೊಬ್ಬ ಮಹಾನ್ ಕಲಾವಿದನಾಗಿದ್ದರೂ ಆ ಹಮ್ಮಿಲ್ಲದೆ ತನಗಿಂತ ಎಷ್ಟೋ ಕಿರಿಯರೊಂದಿಗೂ ಸಹಜವಾಗಿ ಬೆರೆಯುವುದು ಅವರ ದೊಡ್ಡತನ. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಅದು ಅವರ ತಾಳ್ಮೆ. ತನ್ನನ್ನು ಯಾರೇ ಟೀಕಿಸಲಿ ಅವರು ಸಿಟ್ಟಿಗೇಳುವುದಿಲ್ಲ, ತಿರುಗಿ ಬಯ್ಯುವುದಿಲ್ಲ. ಬದಲಾಗಿ ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸುತ್ತಾರೆ. ಇದು ಚಿಟ್ಟಾಣಿಯಂಥ ಮಾಗಿದ ಕಲಾವಿದನಿಗಷ್ಟೇ ಸಾಧ್ಯ.

ಇಂಥ ಚಿಟ್ಟಾಣಿಗೆ ಈಗ ಎಪ್ಪತ್ತಾರು ವರ್ಷ ವಯಸ್ಸು. ಆದರೆ ಉತ್ಸಾಹ ಕುಂದಿಲ್ಲ. ದೇಹ ಸಹಕರಿಸದಿದ್ದರೂ ಮನಸ್ಸು ಕೇಳುತ್ತಿಲ್ಲ. ಆದ್ದರಿಂದಲೇ ಈಗಲೂ ಅವರು ಬಣ್ಣ ಹಚ್ಚಿ ಗೆಜ್ಜೆ ಕಟ್ಟುತ್ತಿದ್ದಾರೆ. 'ಸಾಕಪ್ಪ ಇನ್ಯಾಕೆ?' ಎಂದು ರಂಗದಿಂದ ವಿರಮಿಸಿದ್ದಿದ್ದರೆ ಈಗಿನ ತಲೆಮಾರಿನ ಅನೇಕರು ಚಿಟ್ಟಾಣಿಯವರ ಹಾವಭಾವ, ಮಾತು-ಮೌನಗಳನ್ನು ಬರೀ ಸಿ.ಡಿ.ಯಲ್ಲಷ್ಟೇ ನೋಡಬಹುದಿತ್ತು. ಅಷ್ಟರಮಟ್ಟಿಗೆ ನಾವು ಪುಣ್ಯಮಾಡಿದ್ದೇವೆ.

"ಅಪ್ಪನಿಗೆ ಈಗಲೂ ಹಿಂದಿನ ಉತ್ಸಾಹವೇ ಇದೆ. ಆದರೆ ನಾನೇ ಈಗ ಅವರನ್ನು ಪ್ರಸಂಗದ ಅರ್ಧದಷ್ಟು ಹೊತ್ತು ಮಾತ್ರ ಕುಣಿಯುವಂತೆ ನೋಡಿಕೊಳ್ಳುತ್ತಿದ್ದೇನೆ. ಆದ್ದರಿಂದಲೇ ಈಗ 'ಭಸ್ಮಾಸುರ ಮೋಹಿನಿ' ಯಲ್ಲಿ ಎರಡನೇ ಭಸ್ಮಾಸುರನಾಗಿ, 'ಗದಾಯುದ್ಧ'ದ ಎರಡನೇ ಕೌರವನಾಗಿ, 'ಕಾರ್ತವೀರ್ಯಾರ್ಜುನ'ದ ಮೊದಲನೇ ಕಾರ್ತವೀರ್ಯನಾಗಿ ಮಾತ್ರ ಅವರು ಕಾಣಿಸಿಕೊಳ್ಳುತ್ತಿದ್ದಾರೆ. ಹೀಗೆ ಬಹುತೇಕ ಎಲ್ಲಾ ಪ್ರಸಂಗಗಳಲ್ಲೂ ಅವರು ಅರ್ಧ ಭಾಗವಷ್ಟೇ ರಂಗದಲ್ಲಿರುತ್ತಾರೆ. ಇದರಿಂದಾಗಿ ಅವರಿಗೆ ಹೆಚ್ಚು ಸುಸ್ತಾಗುವುದಿಲ್ಲ. ಹಾಗಾಗಿ ಇನ್ನೂ ಅನೇಕ ವರ್ಷಗಳ ಕಾಲ ಅವರು ವೇಷ ಹಾಕಬಹುದು ಎಂಬುದು ನನ್ನ ಆಶಯ" ಎನ್ನುತ್ತಾರೆ ಮಗ ಸುಬ್ರಹ್ಮಣ್ಯ ಚಿಟ್ಟಾಣಿ.

ಕಳೆದ ವರ್ಷ ಮೈಸೂರಿನಲ್ಲಿ 'ಚಿಟ್ಟಾಣಿ ಯಕ್ಷಗಾನ ಸಪ್ತಾಹ' ಏರ್ಪಾಡಾಗಿತ್ತು. ಆಗ ಅಲ್ಲಿಗೆ ಆಗಮಿಸಿದ್ದ ಚಿಟ್ಟಾಣಿಯವರನ್ನು ಬೆನ್ನುಬಿದ್ದು ಸಂದರ್ಶಿಸಿದ್ದೆ. ಸುಮಾರು ಎರಡು ಗಂಟೆಗಳ ಕಾಲ ಯಕ್ಷರಂಗದ ಗತ ವೈಭವ, ಈಗಿನ ಬೆಳವಣಿಗೆ, ಭವಿಷ್ಯ ಹೀಗೆ ವಿವಿಧ ವಿಚಾರಗಳ ಬಗೆಗೆ ಚರ್ಚಿಸಿದ್ದರು.

ಆದರೆ ಚಿಟ್ಟಾಣಿ ಏನು ಹೇಳಿದರು ಎಂಬ ಕುತೂಹಲವನ್ನು ತಣಿಸಿಕೊಳ್ಳಲು ನೀವು ಮುಂದಿನ ಸಂಚಿಕೆಯವರೆಗೆ ಕಾಯುವುದು ಅನಿವಾರ್ಯ!

■



## ನಿಮ್ಮ ಬರಹ ನಮ್ಮ ಓದು...

**ಮೂಕಾಂಬಿಕಾ ನೃತ್ಯಶಾಲೆಯ ವಿದ್ಯಾರ್ಥಿಗಳಾದ ಬಂಟ್ವಾಳದ ಕೇಶವ ಡಿ., ನಮಿತಾ, ದೇವಕಿ, ಪಾವನಾ, ಶುಭಾ, ನಿಶಾ, ಪುತ್ತೂರಿನ ನಿಖಿಲಶ್ರೀ, ಪ್ರಣಮ್ಯ, ರಶ್ಮಿತಾ, ರೂಪಲೇಖಾ, ಮೇಘನಾ, ವಿದ್ಯಾ ಮನೋಜ್ ಈ ಸಾಲಿನಿಂದ ಪತ್ರಿಕೆಯ ಸದಸ್ಯರಾಗಿದ್ದಾರೆ. ವಿಮರ್ಶಕ ಬೆಂಗಳೂರಿನ ಜಿ. ಬಿ. ಹರೀಶ್, ಸಂಪಾಜೆಯ ಕೊಂದಲಕಾಡು ನಾರಾಯಣ ಭಟ್, ರಾಯಚೂರಿನ ಸುರೇಶ್ ಜಾಲಹಳ್ಳಿ, ಸಾಗರದ ಹಿರಿಯ ವಿದ್ವಾಂಸ ಮೋಹನ. ಗ. ಹೆಗಡೆ ಮುಂತಾದ ಸಹೃದಯ ಮಿತ್ರರು ಪತ್ರಬರೆದು ಅಭಿನಂದಿಸಿದ್ದಾರೆ.**

**ಅಂ**ತರ್–ರಾಷ್ಟ್ರೀಯ ನೆಲೆಯಲ್ಲಿ ಕಲಾವಿದರನ್ನೂ, ಓದುಗರನ್ನೂ ಬಹುವೇಗವಾಗಿ ತಲುಪುತ್ತಿರುವ ನೂಪುರ ಭ್ರಮರಿಯ ಪ್ರಯತ್ನಗಳಿಗೆ ಶುಭಾಶಯ. ಒಂದರ್ಥದಲ್ಲಿ ನೀವು ಭಾರತೀಯ ಸಾಂಪ್ರದಾಯಿಕ ಕಲೆ ಮತ್ತು ಕಲಾವಿದರ ರಾಯಭಾರಿಯೇ ಹೌದು. ಕಲಾಸಕ್ತರನ್ನು ಮುಟ್ಟುವಲ್ಲಿ ಮತ್ತು ಅವರ ಹೃದಯಗಳಿಗೆ ಸೇತು ಬೆಸೆಯುವ ನಿಮ್ಮ ಆಶಯ ಮತ್ತು ಪ್ರಯತ್ನಗಳಿಗೆ ಹೆಮ್ಮೆ ಪಡುತ್ತೇನೆ. ನಿಮ್ಮ ಈ ಪಥದಲ್ಲಿ ಯಶಸ್ಸು ಸಿಗಲಿ.

**–ಡಾ. ಚಂದ್ರಶೇಖರ ದಾಮ್ಲೆ, ಸುಳ್ಯ.**

**ಚಿ**ತ್ರ–ವ್ಯಂಗ್ಯಚಿತ್ರ ಕಲಾವಿದನಾದ ನಾನು ನರ್ತನ ಜಗತ್ತಿಗೊಂದು ಪುಟ್ಟ ಪರಿಭ್ರಮಣ ಮಾಡಿ ನಿಮ್ಮ ಪ್ರಯತ್ನಕ್ಕೆ ಬೆರಗಾದೆ. ಶುಭ ತರಲಿ ಪಯಣ.

**– ಜಿ.ಎಂ.ಬೊಮ್ನಳ್ಳಿ, ವ್ಯಂಗ್ಯಚಿತ್ರಕಾರು, ಉತ್ತ ರಕನ್ನಡ.**

**ನಾ**ಟ್ಯದ ಬಗ್ಗೆ ಉತ್ತಮ ಮಾಹಿತಿ ಕೋಡುವ ನಿಮ್ಮ ಪ್ರಯತ್ನ ಅಭಿನಂದನೆಗೆ ಅರ್ಹವಾದುದು. ಪ್ರಚಲಿತವಾಗಿರುವ ಎಲ್ಲಾ ನಾಟ್ಯ ಪ್ರಕಾರಗಳ ಬಗ್ಗೆ ಮಾಹಿತಿ ನೀಡಿದರೆ ಮತ್ತಷ್ಟು ಒಳ್ಳೆಯದು. ಯಶಸ್ಸು ನಿಮ್ಮದಾಗಲಿ.

**– ನವೀನ್, ಬೆಂಗಳೂರು.**

**(ನಿಮ್ಮ ಸಲಹೆ ಸೂಕ್ತವಾದುದು. ಆದರೆ ನಾಟ್ಯಪ್ರಕಾರಗಳಿಗೆ ಸಂಬಂಧಿಸಿದ ಪರಿಣತರು ಮುಂದೆ ಬಂದು ಈ ನಿಟ್ಟಿನಲ್ಲಿ ಪ್ರಯತ್ನಿಸಿದರೆ ಒಳ್ಳೆಯದು. ಆದರೆ ಬಹಳ ಸಂದರ್ಭದಲ್ಲಿ ಲೇಖಕರ ಕೆಲವು ನಿರೀಕ್ಷೆಗಳನ್ನು ಮುಟ್ಟಲು ಸಾಧ್ಯವಾಗುವುದಿಲ್ಲ. ಓದುಗರ ಸೌಜನ್ಯ ಮತ್ತು ಮಿತ್ರರ ಬೆಂಬಲದಿಂದ ನಡೆಯುವ ಪತ್ರಿಕೆಗೆ ಸದ್ಯಕ್ಕೆ ಅಂಕಣಕಾರರಿಗೆ, ಲೇಖಕರಿಗೆ ಸಂಭಾವನೆ ಕೊಡುವಷ್ಟು ಶಕ್ತಿ ಇಲ್ಲ. ಜೊತೆಗೆ ನಕಲು ಮಾಡಲು ಮನಸ್ಸಿಲ್ಲ. ಆದರೂ ಗುಣಮಟ್ಟದ ಪ್ರಯತ್ನಗಳನ್ನು ಜಾರಿಯಲ್ಲಿಟ್ಟಿರುತ್ತೇವೆ. ನಿಮ್ಮ ಆಶಯಕ್ಕೆ ಸಾಕಷ್ಟು ಮನ್ನಣೆ ಸಿಗುವಂತೆ ನೋಡಿಕೊಳ್ಳುತ್ತೇವೆ.**

**–ನೂಪುರ ಬಳಗ. )**





**ಕ**ಳೆದ ಸಂಚಿಕೆಯ ಮಂಜೀರದಲ್ಲಿ ಸಂಪಾದಕರು ಪ್ರೀತಿಯಿಂದ ಬರೆದ ಕಹಿಗುಳಿಗೆಗಳು ಕಲೆಯ ಸಾಧನೆ, ಆರಾಧನೆ, ಬೋಧನೆಯ ನಿಟ್ಟಿನಲ್ಲಿ ಆರೋಗ್ಯದಾಯಕವಾದವುಗಳು. ಚಿಂತನೆಗೆ ಗ್ರಾಸವಾಗಿದೆ.

ಅನುಶ್ರೀ ಬಂದಾಡಿಯವರು ರಂಗಭ್ರಮರಿಯಲ್ಲಿ ನೃತ್ಯಸ್ಪರ್ಧೆಗಳಲ್ಲಿ ಭಾಗವಹಿಸುವ ಪುಟ್ಟ ಮಕ್ಕಳ ಪ್ರದರ್ಶನದ ನ್ಯೂನತೆ, ಗುರುಗಳು, ಹೆತ್ತವರು, ಮಾಧ್ಯಮಗಳು ವಹಿಸಬೇಕಾದ ಕರ್ತವ್ಯಗಳನ್ನು ಸೂಚಿಸಿರುವುದು ವೈಯಕ್ತಿಕ ಅಭಿಪ್ರಾಯವಾದರೂ ಇಲ್ಲಿಯೂ ಹಲವು ಅಂಶಗಳು ಗಮನೀಯವಾಗಿವೆ.

ಅಷ್ಟನಾಯಕಿಯರ ಚಿತ್ತವೃತ್ತಿಗಳನ್ನು ಮಂಟಪ ಪ್ರಭಾಕರ ಉಪಾಧ್ಯರು ಪ್ರದರ್ಶಿಸುವ ಸಾಧನೆ, ಯಕ್ಷಗಾನ ಅಭಿನಯ ಕ್ಷೇತ್ರದ ಒಂದು ಹೊಸ ಆಯಾಮ. ಅವರೊಬ್ಬ ಅಪೂರ್ವ ಕಲಾವಿದರು.

ಧರ್ಮಸ್ಥಳದ ಸಿದ್ಧವನದಲ್ಲಿ ಒಂದು ವಾರ ಜರುಗಿದ ಯಕ್ಷಗಾನ ಪುನಶ್ಚೇತನಾ ಶಿಬಿರದ ಲೇಖನ ತೆಂಕು+ಬಡಗು ತಿಟ್ಟುಗಳ ವೃತ್ತಿಪರ ಕಲಾವಿದರು ಕಲಿಯಬೇಕಾದುದು ತುಂಬಾ ಇದೆ ಎಂಬ ಪ್ರಜ್ಞೆ ಮೂಡಿಸಿದೆ. ಇನ್ನಷ್ಟು ಯಕ್ಷಗಾನ ತಿಟ್ಟುಗಳನ್ನು ಸೇರಿಸಿ ಇಂತಹ ಪುನಶ್ಚೇತನಾ ಶಿಬಿರಗಳು ಆಗುವುದು ಅಗತ್ಯ. ಅದರಿಂದ ಯಾವುದೇ ತಿಟ್ಟು ಕೆಡಲಾರದು.ಇದು ನನ್ನ ಕಲಾಬದುಕಿನ ವಿನೀತ ನಂಬಿಕೆ.

ಚಿಟ್ಟಾಣಿಯವರ ಬಗ್ಗೆ ಇನ್ನಷ್ಟು ಮುಂದಿನ ಸಂಚಿಕೆಯಲ್ಲಿ ಓದಲು ಕುತೂಹಲಿಗಳಾಗುತ್ತೇವೆ.

ಹಸ್ತಮುದ್ರಿಕೆಗಳ ವಿಸ್ತಾರವಾದ ವಿನಿಯೋಗದ 'ಹಸ್ತಮಯೂರಿ'ಗೆ ಎಲ್ಲಾ ನೃತ್ಯವಿದ್ಯಾರ್ಥಿ ಪರಿವಾರದ ಪರವಾಗಿ ಅಭಿನಂದನೆ ಹೇಳುತ್ತೇನೆ. ಇದು ನಾಟ್ಯಸಂಪ್ರದಾಯದ ವಾರಸುದಾರರೆಂಬುವರು ಗಮನಿಸಬೇಕಾದ ಅಂಶ. ಹೊಸ ಮಾರ್ಗ.

'ಶಿಕ್ಷಣದಲ್ಲಿ ಯಕ್ಷಗಾನ ಪಾಠಪಟ್ಟಿ' ತಿಂಗಳ ಚರ್ಚೆ ಕ್ರೀಡಾ ಮನೋಭಾವನೆಯಿಂದ ಸಾಗಲಿ ಎಂಬುದು ನಮ್ಮ ಆಶಯ. ' ಮಣ್ಣ್‌ತ ಪುಚ್ಚೆ ಆವಡ್ ಮಯನೊತ ಪುಚ್ಚೆ ಆವಡ್ ಎಲಿಪತ್ತೊಡು' ಅಂತ ತುಳುವಿನ ಗಾದೆ ಇದೆ.

ಯಕ್ಷಗಾನ ನಾಟ್ಯ ಮತ್ತು ತಾಳವಾದ್ಯಗಳ ಕಲಾಪರೀಕ್ಷೆಗಳನ್ನು ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿಯ ಪರೀಕ್ಷೆಗಳ ವಿಷಯವಾಗಿ ಪರಿಗಣಿಸುವಂತೆ ಮಾರ್ಗಸೂಚಿ ಕೈಪಿಡಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರನ್ನು ಕೇಳಲಾಗಿದೆ. ಜೊತೆಗೆ ಶಿವರಾಮ ಕಾರಂತರ ಬಾಲವನದಲ್ಲಿ ಯಕ್ಷಗಾನ ಸಂಶೋಧನಾ ತರಬೇತಿ ಕೇಂದ್ರವಾಗುವಂತೆ, ಯಕ್ಷಗಾನ ಅಕಾಡೆಮಿಯು ಬೆಂಗಳೂರಿನಿಂದ ಕರಾವಳಿಗೆ ಬರುವಂತೆ ಪ್ರಯತ್ನ ಸಾಗಬೇಕು. ಭಾರತದ ಶಾಸ್ತ್ರೀಯ ನಾಟ್ಯವಾಗಿ ಯಕ್ಷಗಾನ ಮಾನ್ಯತೆ ಪಡೆಯುವ ಅರ್ಹತೆ ಹೊಂದಿದೆ. ನಮ್ಮ ರಾಜಕೀಯ ಮುಂದಾಳುಗಳು ರಾಜ್ಯ ಮತ್ತು ಕೇಂದ್ರ ಸರ್ಕಾರದಲ್ಲಿ ಯಕ್ಷಗಾನ ನಾಟ್ಯಪ್ರಕಾರಕ್ಕೆ ಗೌರವ ತಂದುಕೊಡಲಿ ಎಂಬುದು ನಮ್ಮ ಹಾರೈಕೆ.

**–ಕುದ್ಕಾಡಿ ವಿಶ್ವನಾಥ ರೈ**
**ನಿರ್ದೇಶಕ, ವಿಶ್ವಕಲಾ ನಿಕೇತನ, ಪುತ್ತೂರು.**

ಆತ್ಮೀಯರೇ,

## ನೂಪುರ ಭ್ರಮರಿ ಬಳಗದ
## ಮಿತ್ರರ ಆತ್ಮೀಯ ಆಮಂತ್ರಣ

ಸಂವಹನ ಮಾಧ್ಯಮವಾಗಿ, ಶಾಸ್ತ್ರೀಯ ಪರಿಭಾಷೆಯಾಗಿ ಹಸ್ತಮುದ್ರೆಗಳ ಪಾತ್ರ ಹಿರಿದಿದ್ದರೂ, ಇವುಗಳ ಕುರಿತಂತೆ ನಡೆದ ಅಧ್ಯಯನಗಳು ಬಹಳ ವಿರಳ. ಅದರಲ್ಲೂ ಸಂಹವನ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳ ಕುರಿತಂತೆ ಆಳವಾದ ಪರಿಶೋಧನೆಗಳು ಜರುಗಿಲ್ಲ. ಸಾಮಾನ್ಯವಾಗಿ ಈ ಮುದ್ರೆಗಳನ್ನು ಸೌಂದರ್ಯ ಸೂಚಕಗಳಾಗಿ ಪರಿಗಣಿಸುತ್ತಾರೆಯೇ ವಿನಃ, ಸಾಮಾಜಿಕ ಅಥವಾ ಸಂವಹನದ ದೃಷ್ಟಿಯಲ್ಲಿ ಚಿಂತಿಸಲ್ಪಡುವುದಿಲ್ಲ. ಹಸ್ತವಿನ್ಯಾಸಗಳ ಬಗೆಗೆ ವಿವರಣೆಯಿರುವ ಪುಸ್ತಕಗಳಿವೆಯೇ ಹೊರತು ಸಂಶೋಧನಾತ್ಮಕ ಅಧ್ಯಯನಗಳು ನಡೆದಿಲ್ಲ. ಹಾಗಾಗಿ ಒಂದು ನೆಲೆಗಟ್ಟಿನಿಂದ ನೋಡಿದಾಗ 'ಸಂವಹನ ಮಾಧ್ಯಮವಾಗಿ ಹಸ್ತಮುದ್ರೆಗಳು' ಎಂಬ ವಿಷಯ ಸಂಶೋಧಕರ ಗಮನ ಸೆಳೆದಿಲ್ಲವೆಂದೇ ಹೇಳಬೇಕು. (ಈ ನಿಟ್ಟಿನಲ್ಲಿ ಪತ್ರಿಕೆಯೂ 'ಹಸ್ತಮಯೂರಿ' ಯ ಮೂಲಕ ಗಮನಾರ್ಹ ರೀತಿಯಿಂದ ಪ್ರಯತ್ನ ಮಾಡುತ್ತಿರುವುದು ನಿಮಗೆ ತಿಳಿದ ವಿಷಯವೇ !) ಆದ್ದರಿಂದ ಹಸ್ತ ಮುದ್ರೆಗಳ ಭಾವ, ಉಪಯೋಗ, ಸಂವಹನದ ಸಾಧ್ಯತೆಗಳನ್ನು ಗಮನದಲ್ಲಿರಿಸಿ ಅವುಗಳ ಬಗೆಗೆ ವಿಸ್ತೃತ ಅಧ್ಯಯನ ಮಾಡಿದ ಫಲವೇ ;

## ಮುದ್ರಾರ್ಣವ

*ಸುಮಾರು ೩೦೦ ಪುಟಗಳ ಗ್ರಂಥ.*

*ಪತ್ರಿಕೆಯ ಸಂಪಾದಕಿ ಮನೋರಮಾ ಬಿ. ಎನ್. ಅವರ ಸಂಶೋಧನಾ ಅಧ್ಯಯನದ ಫಲ.*

*ಇದೇ ಬರುವ ನವೆಂಬರ್ ೨೨ ರಂದು ಧರ್ಮಸ್ಥಳದ ಬಳಿ ಇರುವ ಉಜಿರೆಯ ಜನಾರ್ಧನ ಸ್ವಾಮಿ ದೇವಸ್ಥಾನದ ಸಭಾಂಗಣದಲ್ಲಿ, ಕುರಿಯ ವಿಠಲ ಶಾಸ್ತ್ರಿ ಯಕ್ಷಗಾನ ಪ್ರತಿಷ್ಠಾನದ ಪ್ರಕಾಶನದೊಂದಿಗೆ ಯಕ್ಷಸಪ್ತಾಹದ ಜೊತೆಗೆ ಭವ್ಯವೇದಿಕೆಯಲ್ಲಿ ಲೋಕಾರ್ಪಣಗೊಳ್ಳುತ್ತಿದೆ.*

*ತಮ್ಮೆಲ್ಲರ ಉಪಸ್ಥಿತಿಯೇ ನಮಗೆ ದೊಡ್ಡ ಸಂತೋಷ ಮತ್ತು ಹೆಮ್ಮೆ.*

*ಪುಸ್ತಕದಲ್ಲಿ ನಿರೂಪಿತವಾದ ಅಂಶಗಳೆಡೆಗೆ ಒಂದು ಕ್ಷ-ಕಿರಣ*

- ಭರತನಾಟ್ಯದಲ್ಲಿ ಉಪಯೋಗಿಸಲಾಗುತ್ತಿರುವ ಹಸ್ತಗಳನ್ನು ಪ್ರಧಾನವಾಗಿರಿಸಿಕೊಂಡು ಇತರೆ ಮರೆಯಾಗಿರುವ ಹಸ್ತಗಳ ಕುರಿತ ಅವಲೋಕನ ಮತ್ತು ಅವುಗಳ ಸಂವಹನ ಪ್ರಕ್ರಿಯೆ ಎಷ್ಟರ ಪಟ್ಟಿಗೆ ಮಹತ್ವಪೂರ್ಣವಾಗಿದೆ ಎಂಬುದು ಸಂಸೋಧನೆಯ ಮೂಲ ಉದ್ದೇಶ. ಜೊತೆಗೆ ಇತರೆ ನೃತ್ಯಪದ್ಧತಿ (ಉದಾ: ಕಥಕ್ಕಳಿ, ಮಣಿಪುರಿ, ಓಡಿಸ್ಸಿ, ಯಕ್ಷಗಾನ)ಗಳಲ್ಲಿ ಬಳಕೆಯಾಗುತ್ತಿರುವ ಹಸ್ತಗಳು ಮತ್ತು ಅವುಗಳಲ್ಲಿ ಎಷ್ಟು ನಾವು ದಿನನಿತ್ಯದ ಜೀವನದಲ್ಲಿ ಬಳಸಿಕೊಳ್ಳುತ್ತೇವೆ ಎಂಬ ಅವಲೋಕನ. ಮತ್ತು ಅವುಗಳಲ್ಲಿನ ಸಮಾನ ಮತ್ತು ವ್ಯತ್ಯಾಸ ಅಂಶಗಳೆಡೆಗೆ ದೃಷ್ಟಿ.





- ಅಭಿನಯದರ್ಪಣದ ಅಂಶಗಳನ್ನೇ ಪ್ರಧಾನವಾಗಿ ಬಳಸಿಕೊಂಡು ಅಧ್ಯಯನ ನಡೆದರೂ ಉಳಿದಂತೆ ನಾಟ್ಯಶಾಸ್ತ್ರ, ಹಸ್ತ ಮುಕ್ತಾವಳಿ, ಹಸ್ತ ಲಕ್ಷಣ ದೀಪಿಕಾ, ಭರತಸಾರ, ಭರತಕಲ್ಪಲತಾ ಮಂಜರಿ, ಸಾರಸಂಗ್ರಹ, ಲಾಸ್ಯರಂಜನ, ಸಂಗೀತ ರತ್ನಾಕರ, ನರ್ತನನಿರ್ಣಯ, ಬಾಲರಾಮ ಭರತ, ಪುರಾಣಗಳು, ಸಂಹಿತೆಗಳು, ಪ್ರಣೀತಗಳು, – ಹೀಗೆ ಹಲವಾರು ಗ್ರಂಥಗಳಲ್ಲಿ ಪ್ರಸ್ತಾಪಿಸಿದ ಹಸ್ತಗಳು, ಅವುಗಳ ವಿನಿಯೋಗ, ಮಹತ್ವ, ಪ್ರಚಲಿತದಲ್ಲಿ ಉಪಯೋಗವಾಗುತ್ತಿರುವ ಹಸ್ತಗಳು, ಅವುಗಳ ಮೂಲ, ಧಾರ್ಮಿಕ, ಸಾಮಾಜಿಕ, ರಾಜಕೀಯ, ಗ್ರಾಂಥಿಕ ಹಿನ್ನಲೆಗಳು.
- ಹಸ್ತ ಮುದ್ರೆಗಳು ಮುದ್ರಾವಿಜ್ಞಾನದಲ್ಲಿ, ಹಠಯೋಗ ಪ್ರದೀಪಿಕಾ ಮುಂತಾಗಿ ಯೋಗಶಾಸ್ತ್ರದಲ್ಲಿ, ಮುದ್ರಾ ಶಾಸ್ತ್ರ, ಧಾರ್ಮಿಕ ಪೂಜಾ ವಿಧಿ, ಪ್ರತಿಮಾಶಾಸ್ತ್ರ, ತಂತ್ರ-ಮಂತ್ರಗಳಲ್ಲಿ ಹೇಗೆ ಬಳಕೆಯಾಗುತ್ತಿವೆ ಮತ್ತು ಅವುಗಳ ಉಪಯೋಗ. ಮುಖ್ಯವಾಗಿ ಮುದ್ರೆಗಳ ಬಳಕೆಯಿಂದಾಗುವ ಆರೋಗ್ಯಕರ ಆಯಾಮಗಳ ತುಲನೆ.
- ಅಧ್ಯಯನಕ್ಕೆ ಅವಶ್ಯವಿರುವ ಇತಿಹಾಸ, ಗುಣಾತ್ಮಕ ಪರಿಶೀಲನೆ, ವಿದ್ವಾಂಸರಿಂದ ಆಳ ಸಂದರ್ಶನ, ಪ್ರದರ್ಶನಗಳ ಸಮೀಕ್ಷೆ, ಗ್ರಂಥ ಅಧ್ಯಯನ.

**-ತಮ್ಮ ಪ್ರತಿಗಳನ್ನು ಕಾಯ್ದಿರಿಸಿ-**

## ಲಲಿತ ಲಹರಿ

**ಹೊಸ ಹಸಿರು ಚಿಗುರೀತು**
**ಹೊಸ ಕನಸು ಹುಟ್ಟೀತು**
**ಮತ್ತೆ ಧುಮ್ಮಿಕ್ಕುವ ಜೋಗವಾದೀತು**
**ಕರುಣೆ ದ್ರವಿಸೀತು**
**ಎದೆಗೊಲವ ಲಾಘವಗಳೆದುರಿಸುವ**
**ಚೈತನ್ಯ ತಂದೀತು**
**ಮತ್ತೆ ನೂಪುರ ಬೆಸೆದು**
**ಉದುರಿ ನಿಂತಿಹ ಗೆಜ್ಜೆ**
**ಲಯಬದ್ಧ ನಡಿಗೆಯಲಿ ನಾಟ್ಯವಾದೀತು..........!**
**ಬದುಕ ಕಲಿಸೀತು.**

- **ಕಪಿಲಾ ಶ್ರೀಧರ್,** ಬೆಂಗಳೂರು.